ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 24 | ಜೂನ್ 14, 1981 | ಬೆಲೆ : 60 ಪೈಸೆ

ತವರು ಮನೆಗೆ

ಕಳೆದ ಲೋಕಸಭಾ ಚುನಾವಣೆಗೆ ಮೊದಲು ಬೇರೆಬೇರೆ ಕಾರಣಗಳಿಗಾಗಿ ಇಂದಿರಾಗಾಂಧಿಯನ್ನು ವಿರೋಧಿಸಿ ಇಂದಿರಾಕಾಂಗ್ರೆಸ್ಸಿನಿಂದ ಪ್ರತ್ಯೇಕಗೊಂಡು ಉಳಿದ ಕಾಂಗ್ರೆಸ್ (ಯು)ನ ಭವಿಷ್ಯದ ಬಗ್ಗೆ ಪ್ರಾರಂಭದಿಂದಲೂ ಸ್ಪಷ್ಟತೆ ಇದ್ದಿಲ್ಲ. ಇದೀಗ ವೈ. ಬಿ. ಚವಾಣರಿಂದ ಉಚ್ಚಾಟಿಸಲ್ಪಟ್ಟಿರುವ ಮತ್ತೆ ತವರಿಗೆ ಹೋಗುವ ಕ್ರಮದಿಂದಲಾಗಿ ಕಾಂಗ್ರೆಸ್ (ಯು)ನ ಭವಿಷ್ಯ ಇನ್ನೂ ಹೆಚ್ಚಿಗೆ ಅಸ್ಪಷ್ಟತೆ ಮತ್ತು ಗೊಂದಲಗಳಿಂದ ಸೇರಿಕೊಂಡಿದೆ.

ಇಂದಿರಾಗಾಂಧಿ ಅವರ ಸರ್ವಾಧಿಕಾರ ಪ್ರವೃತ್ತಿಯನ್ನು ದೇವರಾಜ ಅರಸು ಮತ್ತು ಅವರ ಬೆಂಬಲಿಗರು ವಿರೋಧಿಸಿದಾಗ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಇದನ್ನು ಸ್ವಾಗತಿಸಿದ್ದುವು. ತನ್ನ ಅಸ್ತಿತ್ವವನ್ನು ಉಳಿಸಿ ಬೆಳೆಸಿಕೊಳ್ಳುವುದಕ್ಕಾಗಿ ಸ್ಪಷ್ಟ ಮತ್ತು ನಿರ್ದಿಷ್ಟವಾದ ಕಾರ್ಯಕ್ರಮ ಮತ್ತು ಧೋರಣೆಗಳ ಆಧಾರದಲ್ಲಿ ಚುರುಕಿನಿಂದ ಅರಸು ಅವರ ನೇತೃತ್ವದ ಕಾಂಗ್ರೆಸ್ ಪಕ್ಷವು ಶ್ರಮಿಸುವುದೆಂದು ಆಶಿಸಲಾಗಿತ್ತು. ವ್ಯಕ್ತಿನಿಷ್ಠೆ ರಾಜಕೀಯಕ್ಕೆ ಬದಲು ತತ್ವನಿಷ್ಠೆ ಮತ್ತು ಕಾರ್ಯನಿಷ್ಠೆ ರಾಜಕೀಯವನ್ನು ಅನುಸರಿಸಿ, ಎಡ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೇರಿ ಬದಲಿ ರಾಜಕೀಯ ಪರ್ಯಾಯವೊಂದನ್ನು ರೂಪಿಸುವುದರಲ್ಲೂ ಕಾಂಗ್ರೆಸ್ (ಯು)

ಸಂಪಾದಕೀಯ

ಮುಂದಾಗಬೇಕೆಂದು ಆಶಿಸಲಾಗಿತ್ತು. ಇತ್ತೀಚಿಗಿನ ದಿನಗಳಲ್ಲಿ ಇತರೆ ಎಡ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಕಾಂಗ್ರೆಸ್ (ಯು) ಸೇರಿ ನಡೆಸಿರುವ ಚಳುವಳಿಗಳು ಆ ಪಕ್ಷಕ್ಕೆ ಚೇತನ ತುಂಬಿದ್ದುವು.

ಇದೇ ಸಂದರ್ಭದಲ್ಲಿ ಅಧಿಕಾರದ ರುಚಿಯನ್ನುಂಡು ಮತ್ತೆ ಅಧಿಕಾರಕ್ಕಾಗಿ ಹಾತೊರೆಯುವ ಬೆನ್ನೆಲುಬಿಲ್ಲದ ಮುಖಂಡರುಗಳು ಮತ್ತು ರಾಜಕಾರಣಿಗಳು ತ ವ ರು ಮ ನೆ ಗೆ ಹೋಗುವುದರಲ್ಲಿದ್ದಾರೆ. ಸ್ವಂತ ಲಾಭಕ್ಕಾಗಿ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳು ಬಲಗೊಳ್ಳದಂತೆ ಮಾಡಲು ಈ ಕ್ರಮ ತೆಗೆದುಕೊಂಡಂತಿದೆ. ಮಹಾರಾಷ್ಟ್ರ, ಕರ್ನಾಟಕ ಮೊದಲಾದೆಡೆಗಳಲ್ಲಿ ಇಂದಿರಾ ಕಾಂಗ್ರೆಸ್‌ಕಡೆ ಸೇರಲು ಕಾಂಗ್ರೆಸ್(ಯು)ನ ಹಲವಾರು ಮಂದಿ ಪೈಪೋಟಿ ನಡೆಸುತ್ತಲಿರುವ ಈ ಸಂದರ್ಭದಲ್ಲಿ "ಪಕ್ಷವೆಂದರೆ ಶಾಸಕರು ಮಾತ್ರವೇ ಅಲ್ಲ; ಅದರ ನಿಜವಾದ ಶಕ್ತಿ ಜನತೆಯ ಬೆಂಬಲದಲ್ಲಿದೆ" ಎಂಬುದಾಗಿ ಶ್ರೀ ದೇವರಾಜ ಅರಸು ಅವರು ಹೇಳಿರುವುದಾಗಿ ವರದಿ ಆಗಿದೆ. ಈ ದಿಸೆಯಲ್ಲಿ ಅವರು ಹೆಚ್ಚಿನ ಚುರುಕಿನಿಂದ ಶ್ರಮಿಸಿದ್ದಿದ್ದರೆ ಇಂದಿನ ಸ್ಥಿತಿ ಬರುತ್ತಿರಲಿಲ್ಲ. ಇನ್ನಾದರೂ, ಅಳಿದುಳಿದ ಕೆಲವರೇ ಆದರೂ, ಜನಬೆಂಬಲ ಪಡೆಯುವ ಕಾರ್ಯಕ್ರಮ ಮತ್ತು ಹೋರಾಟಗಳನ್ನು ನಡೆಸಿ, ನಿರ್ದಿಷ್ಟ ಧೋರಣೆಗಳ ಆಧಾರದಲ್ಲಿ ಮುನ್ನಡೆದರೆ ಕಾಂಗ್ರೆಸ್ (ಯು)ಗೆ ಭವಿಷ್ಯವಿದೆ. ಇಂದಿರಾ ಕಾಂಗ್ರೆಸ್ಸಿನೆಡೆಗೆ ಓಡುತ್ತಿರುವವರ ಭವಿಷ್ಯ ಇಂದಿರಾ ಕೈಯಲ್ಲಿದೆ.

ಶತಮಾನದ ಭೀಕರ ದುರಂತ

ಬಿಹಾರದ ರೈಲ್ವೆ ಅಪಘಾತ

ಜೂನ್ 6ರಂದು ಪ್ರಯಾಣಿಕರ ರೈಲೊಂದು ಬಿಹಾರದ ಬಾಗ್ಮತಿ ನದಿಗೆ ಉರುಳಿ ನೂರಾರು ಜನರು ಮೃತಪಟ್ಟ ಘೋರ ದುರಂತ ಜರುಗಿದೆ. ಸಮಸ್ತಿಪುರ – ಬ ನ ಮ ಖಿ ಪ್ರಯಾಣಿಕರ ರೈಲು ದುರಂತಕ್ಕೀಡಾಗಿದೆ. ಇಲ್ಲಿಯವರೆಗೆ ನೂರಾರು ಮೃತದೇಹಗಳನ್ನು ಹೊರತೆಗೆಯಲಾಗಿದೆ.

ದುರಂತದಲ್ಲಿ ಮುಳುಗಿದ್ದ ಎಲ್ಲ ಬೋಗಿಗಳನ್ನು ಹೊರತೆಗೆಯಲಾಗಿದೆ. ಭಾರತದ ಇತಿಹಾಸದಲ್ಲಿ ನಡೆದ ಈ ಘೋರ ದುರಂತಕ್ಕೆ ಸಮಂಜಸ ಕಾರಣಗಳನ್ನು ರೇಲ್ವೆಬೋರ್ಡಿನವರು ರೇಲ್ವೆ ಖಾತೆ ಈವರೆಗೆ ಕೊಟ್ಟಿಲ್ಲ. ದುರಂತ ನಡೆದು ಒಂದುವಾರಕ್ಕೂ ಮೇಲಾಗಿದೆ. ಮೃತಪಟ್ಟವರ ಅಧಿಕೃತ ಸಂಖ್ಯೆಯನ್ನೂ ಕೊಟ್ಟಿಲ್ಲ. ಅಳಿದುಳಿದ ಗಾಯಾಳು ಪ್ರಯಾಣಿಕರ ಹೇಳಿಕೆಯಂತೆ ಮೃತರ ಸಂಖ್ಯೆ ಸುಮಾರು ಮೂರು ಸಾವಿರದಷ್ಟು. ಈ ಅಪಘಾತಕ್ಕೆ ಅಂದು ಸಂಭವಿಸಿದ ಬಿರುಗಾಳಿಯೇ ಕಾರಣವೆಂದು ರೇಲ್ವೆ ಬೋರ್ಡ್ ಎಂ. ಎಸ್. ಗುಜ್ರಾಲ್ ಮತ್ತು ಇತರ ಸರಕಾರಿ ವಕ್ತಾರರು ಹೇಳಿದ್ದಾರೆ. ಆದರೆ ದುರಂತ ಸಂಭವಿಸಿದ ಪ್ರದೇಶದಲ್ಲಿ ಶನಿವಾರ (6 ರಂದು) ಬಿರುಗಾಳಿ ಬೀಸಿದ ಬಗ್ಗೆ ಹವಾಮಾನ ಕಚೇರಿ ಯಾವುದೇ ದಾಖಲೆಮಾಡಿಲ್ಲ. ಅಂದಿನ ಹವಾಮಾನದ ಪರಿಸ್ಥಿತಿ ಕುರಿತು ಪತ್ರಿಕೆಗಳಿಗೆ ಯಾವುದೇ ಮಾಹಿತಿ ನೀಡದಂತೆ ಪೂನಾದಕೇಂದ್ರ ಹವಾಮಾನ ಕಚೇರಿಗೆ ಸೂಚನೆ ಕಳಿಸಲಾಗಿದೆಯಂತೆ. ಇದರಿಂದ ಮಾನವ ವೈಫಲ್ಯವೇ ದುರಂತಕ್ಕೆ ಕಾರಣವೆಂಬುದು ಸ್ಪಷ್ಟ.

ದುರಂತದಲ್ಲಿ ಮೃತರಾದವರಿಗೆ ತಲಾ 1000ರೂ. ನಷ್ಟ ಪರಿಹಾರ ಘೋಷಿಸಿರುವ ವರದಿಯಾಗಿದೆ. ಇದು ಯಾತಕ್ಕೂ ಸಾಲದು. ಮೃತರ ಕುಟುಂಬಕ್ಕೆ, ಗಾಯಗೊಂಡವರಿಗೆ ಯೋಗ್ಯ ಪರಿಹಾರ ಕೊಡಬೇಕು. ಈ ಅ ಪ ಘಾ ತ ದ ಹೊಣೆಯನ್ನು ಹೊತ್ತುಕೊಂಡು ಸಂಬಂಧಪಟ್ಟವರು ರಾಜೀನಾಮೆ ನೀಡುವುದು ಯೋಗ್ಯ, ಹಿಂದೆ ರೈಲ್ವೆ ಅಪಘಾತ ನಡೆದ ಹೊಣೆಯನ್ನು ತಾವೇ ಹೊತ್ತುಕೊಂಡು ದಿವಂಗತ ಲಾಲ್‌ಬಹಾದೂರ್‌ಶಾಸ್ತ್ರಿ ರಾಜೀನಾಮೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಈ ದುರಂತದಿಂದ ದಿಗ್ಭ್ರಾಂತಿಗೊಂಡ ಅನೇಕರು ರೈಲ್ವೆ ಮಂತ್ರಿ ಕೇದಾರಪಾಂಡೆಯವರು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದ್ದಾರೆ. ರೈಲ್ವೆ ಬೋರ್ಡ್ ಅಧ್ಯಕ್ಷರು, ಇನ್ನಿತರ ಉನ್ನತ ಅಧಿಕಾರಿಗಳನ್ನು ಅವರವರ ಸ್ಥಾನಗಳಿಂದ ತಕ್ಷಣ ವಜಾ ಮಾಡಬೇಕು. ಅಂದರೆ ತನಿಖಾ ಸಮಯದಲ್ಲಿ ಸತ್ಯ ಹೊರಬಂದು, ಅಪರಾಧಿಗಳನ್ನು ಶಿಕ್ಷಿಸಲು ಸಾಧ್ಯವಾಗುವದು.

ಮಾರ್ಕ್ಸ್‌ವಾದಿ ಕ ಮ್ಯು ನಿ ಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಈ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಸಂತಾಪ ಸೂಚಿಸಿದೆ. ಮತ್ತು ಶ್ರೀ ಕೇದಾರ ಪಾಂಡೆಯವರು ತಕ್ಷಣ ತಮ್ಮ ಸ್ಥಾನದಿಂದ ನಿರ್ಗಮಿಸಬೇಕು ಎಂದು ಒತ್ತಾಯಿಸಿದೆ.

ಇತಿಹಾಸದ ಪುನರಾವರ್ತನೆ

ಜಿಯಾವುರ್ ರಹಮಾನರ ಕೊಲೆ

ಮೇ 30ರ ಬೆಳಗಿನ ನಾಲ್ಕು ಘಂಟೆ ಸಮಯ ಇನ್ನೂ ಕತ್ತಲು ಪೂರ್ತಿ ಕಳೆದಿರಲಿಲ್ಲ. ಬಾಂಗ್ಲಾದೇಶದ ಚಿತ್ತಗಾಂಗ್ ಗುಂಡಿನ ಸಪ್ಪಳದಿಂದ ಎಚ್ಚೆತ್ತಿತು. ಬಾಂಗ್ಲಾದ ರಾಷ್ಟ್ರಪತಿ ಜಿಯಾವುರ್ ರಹಮಾನರ ಕಗ್ಗೊಲೆಯಾಗಿತ್ತು. ಗುಂಡುಗಳು ಜಿಯಾರ ದೇಹವನ್ನು ಛಿದ್ರಗೊಳಿಸಿದ್ದವು. ಮೇಜರ್ ಜನರಲ್ ಮನ್‌ಜೂರರ ನೇತೃತ್ವದಲ್ಲಿ ಬಾಂಗ್ಲಾದ ಸೈನಿಕರ ಒಂದು ವಿಭಾಗ ಈ ವಿದ್ರೋಹ ಮೆಸಗಿತ್ತು. ಮನ್‌ಜೂರ್ ನೇತೃತ್ವದ ಸೈನಿಕ ಪಡೆ ಚಿತ್ತಗಾಂಗ್‌ನ್ನು ಮೂರು ದಿನ ತನ್ನ ವಶದಲ್ಲೇ ಇಟ್ಟುಕೊಂಡಿತ್ತು. ಕಾರ್ಯನಿರತ ರಾಷ್ಟ್ರಪತಿ ಅಬ್ದುಸ್ ಸತ್ತಾರ್ ಮತ್ತು ಸೇನೆಯ ದಂಡನಾಯಕರು ಪರಿಸ್ಥಿತಿ ವಿಕೋಪಕ್ಕೆ ತಿರುಗದಂತೆ ಚಿತ್ತಗಾಂಗ್‌ನ ವಿದ್ರೋಹವನ್ನು ಅಡಗಿಸಿದ್ದಾರೆ. ಜಿಯಾರ ಶವವೂ ಮೂರು ದಿನಗಳ ನಂತರೆ ಕೈವಶವಾಯಿತು. ಜಿಯಾರ ಕೊಲೆ ಮಾಡಿದ ಮನ್‌ಜೂರ್ ಮತ್ತಿತರರು ಸೈನಿಕರ ಆಕ್ರೋಷಕ್ಕೆ ಬಲಿಯಾದರು.

6 ವರ್ಷಗಳ ಹಿಂದೆ ಮುಜೀಬರ್ ರಹಮಾನರ ಕಗ್ಗೊಲೆಯ ನಂತರ ಜಿಯಾರು ಅಧಿಕಾರಕ್ಕೆ ಬಂದರೂ ಬಾಂಗ್ಲಾದ ಸ್ಥಿತಿ ಇನ್ನೂ ಸುಭದ್ರವಾಗಿಲ್ಲವೆಂಬುದನ್ನು ಈ ಘಟನೆಯಿಂದ ವ್ಯಕ್ತವಾಗುತ್ತದೆ. ಜಿಯಾರ ಕೊಲೆ ಅತ್ಯಂತ ಹೇಯ ಘಟನೆಯಾಗಿದೆ. ಈ ಹಿಂದೆ ಮುಜೀಬರ ಕೊಲೆಗೆ ಕಾರಣಕರ್ತರಾದ ವ್ಯಕ್ತಿಗಳನ್ನು ಶಿಕ್ಷಿಸದೇ ಬಿಟ್ಟಿದ್ದೂ ಸಮರ್ಥನೀಯವಲ್ಲ. ಸೈನಿಕ ಶಾಸನವನ್ನು ಕೊನೆಗೊಳಿಸುವ, ಸಂಸದೀಯ ಪ್ರಜಾಸತ್ತೆಯನ್ನು ರೂಪಿಸುವ ಘೋಷಣೆಯನ್ನು ಕೊಟ್ಟು ಮತ್ತು ಈ ದಿಶೆಯಲ್ಲಿ ಜಿಯಾರು ಮು ಂ ದು ವ ರೆಯುತ್ತಿದ್ದರೆಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ಆ ಡ ಳಿ ತ ದ ಪ್ರಮುಖಸ್ಥಾನಗಳಲ್ಲಿ ಸೈನ್ಯದಮುಂದಾಳುಗಳೇ ಪ್ರತಿಷ್ಠಿತರಾಗಿದ್ದರೆಂಬುದನ್ನು ಸ್ಮರಿಸಬೇಕಾಗಿದೆ. ಈ ವೈಪರೀತ್ಯದ ಕಾರಣವಾಗಿಯೇ ಸೈನ್ಯದ ಕೆಲವರ ಷಡ್ಯಂತ್ರ್ಯದಿಂದಾಗಿ ಸ್ವಯಂಜಿಯಾರೇ ಪ್ರಾಣತೆರಬೇಕಾಯಿತು.

ಜಿಯಾವುರ್ ರಹಮಾನರ ಕೊಲೆಯ ಘಟನೆಯಿಂದ ಅಲ್ಲಿಯ ಪ್ರಸಕ್ತ ಸರಕಾರ, ಅಲ್ಲಿಯ ವಿವಿಧ ಜನತಂತ್ರ ಪರವಾದ ಶಕ್ತಿಗಳು ಪಾಠ ಕಲಿಯುವದು ಅವಶ್ಯವಿದೆ. ಸರ್ವಾಧಿಕಾರದ ವಿರುದ್ಧ ಪೂರ್ಣ ರೀತಿಯ ಹೋರಾಟವನ್ನು ಬಾಂಗ್ಲಾ ಜನತೆ ಕೈಗೊಂಡು ಪ್ರಜಾಸತ್ತಾತ್ಮಕ ವ್ಯ ವ ಸ್ಥೆ ಯ ನ್ನು ನೆಲೆಗೊಳಿಸುವ ತ ನ ಕ ಆಡಳಿತದಲ್ಲಿ ಸೈನ್ಯದ ಕೈವಾಡ ತಪ್ಪಿದ್ದಲ್ಲ,

ಜಿಯಾರು ಆಡಳಿತಕ್ಕೆ ಬರುವ ಮೊದಲು, ಬಂದ ನಂತರ ಅನೇಕ ಬಂಡಾಯಗಳುನಡೆದಿದ್ದವು. ಜಿಯಾರು ಆಡಳಿತಕ್ಕೆ ಬಂದ ನಂತರವೂ ಪರಿಸ್ಥಿತಿಯನ್ನು ಸ್ಥಿರಗೊಳಿಸುವಲ್ಲಿ ಸಫಲರಾಗಲಿಲ್ಲ. ಇದಕ್ಕೆ ಅವರ ಕಾರ್ಯ ವೈಖರಿ ಕಾರಣವಾಗಿತ್ತು. ಮಿಲಿಟರಿಯವರ ಕೈವಾಡ ಆಡಳಿತದಲ್ಲಿ ಅಧಿಕವಾಗಿತ್ತು,

ಬಾಂಗ್ಲಾದ ಜನತೆ ಹ ದ ಗೆ ಟ್ಟ ಆರ್ಥಿಕ ವ್ಯವಸ್ಥೆಯಿಂದಾಗಿ ವಿಪರೀತ ಕಂಗೆಟ್ಟಿದ್ದಾರೆ. ದೇಶದಲ್ಲಿ ಕೋಮುವಾದಿ ಸಂಸ್ಥೆಗಳು ವೃದ್ಧಿಸಿವೆ. ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಒಮ್ಮತವಿಲ್ಲದ ಕಾರಣ ಈ ಸಂಸ್ಥೆಗಳು ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳುತ್ತಿವೆ.

ಈ ಸಂದರ್ಭದಲ್ಲಿ ಜನರಲ್ ಜಿಯಾವುರ್ ರಹಮಾನರ ಕಗ್ಗೊಲೆಯನ್ನು ಭಾರತದ ಜನತಂತ್ರ ಪ್ರೇಮಿಗಳು ತೀವ್ರವಾಗಿ ಖಂಡಿಸಿದ್ದಾರೆ. ಪ್ರಸಕ್ತ ಘಟನೆಯಿಂದಾಗಿ ಬಾಂಗ್ಲಾದೇಶದಲ್ಲಿ ಸ್ಥಿರತೆ ಉಂಟಾಗಬಹುದೆಂದು ಊಹಿಸುವಂತಿಲ್ಲ. ಸರ್ವಾಧಿಕಾರಿ ಶಕ್ತಿಗಳ ಹಿಡಿತದಿಂದ ದೇಶವನ್ನು, ಜನತೆಯನ್ನು ಕಾಪಾಡಿ ಪ್ರಜಾಪ್ರಭುತ್ವದತ್ತ ದೇಶವನ್ನು ಕೊಂಡೊಯ್ಯುವುದು ಬಾಂಗ್ಲಾ ದೇಶದ ಪ್ರಜಾಪ್ರಭುತ್ವ ಶಕ್ತಿಗಳ ಆದ್ಯ ಕರ್ತವ್ಯವಾಗಿದೆ. ಇದಕ್ಕಾಗಿ ಬಾಂಗ್ಲಾದ ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗೂಡಿ ಕಾರ್ಯತತ್ಪರವಾಗಬೇಕು. ಮಿಲಿಟರಿಯವರ, ಕೋಮುವಾದಿ ಶಕ್ತಿಗಳ ಹಿಡಿತದಿಂದ ಸೋನಾರ ಬಾಂಗ್ಲಾವನ್ನು ವಿಮೋಚನೆಗೊಳಿಸಬೇಕು.

ಸಮಾನತೆ ನಮ್ಮಗುರಿ! ವಿಮೋಚನೆ ನಮ್ಮಗುರಿ!

ಸಮಾಜದಲ್ಲಿ ಅತ್ಯಂತ ಶೋಷಿತಳಾಗಿರುವ ಮಹಿಳೆಯ ವಿಮೋಚನೆಗೆ ಹೋರಾಟ ಬಿಟ್ಟರೆ ಬೇರೆ ದಾರಿ ಇಲ್ಲ ಎಂಬುದು ಈಗ ಸ್ಪಷ್ಟವಾಗುತ್ತಿರುವ ಸತ್ಯ. ಮಹಿಳೆಯರ ಹಕ್ಕುಗಳು ಮತ್ತು ಸವಲತ್ತುಗಳನ್ನು ರಕ್ಷಿಸುವ ಹೋರಾಟವೊಂದು ಕಡೆ ಮತ್ತು ಸಾಮಾಜಿಕ ಬದಲಾವಣೆಯಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸುವ ಹೊಣೆಗಾರಿಕೆಯೊಂದು ಕಡೆ–ಹೀಗೆ ಇಬ್ಬಗೆಯ ಧ್ಯೇಯಗಳನ್ನು ಇರಿಸಿಕೊಂಡ ಮಹಿಳಾ ಸಂಘಟನೆ ನಮ್ಮ ಸಂದರ್ಭದಲ್ಲಿ ತೀರಾ ಅಗತ್ಯವಾಗಿತ್ತು. ಈ ಧ್ಯೇಯಗಳನ್ನೇ ಹೊಂದಿರುವ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ಅಖಿಲಭಾರತ ಮಟ್ಟದಲ್ಲಿ ಈಗಾಗಲೇ ರೂಪುಗೊಂಡಿದೆ. ಇದರ ಕರ್ನಾಟಕ ಘಟಕದ ಸ್ಥಾಪನಾ ಸಮಾವೇಶವು ಜೂನ್ 1, 2 ಮತ್ತು 3 ರಂದು ಬೆಂಗಳೂರಿನ ಚಾಮರಾಜಪೇಟೆಯ ರಾಮೇಶ್ವರ ಕಲ್ಯಾಣ ಮಂದಿರದಲ್ಲಿ ನಡೆಯಿತು.

ಬಹಳದಿನಗಳಿಂದಲೂ ಈ ಸಮ್ಮೇಳನಕ್ಕೆ ಸಿದ್ಧತೆ, ಪ್ರಚಾರ ನಡೆದಿತ್ತು. ಮಹಿಳೆಯರನ್ನು ಕುರಿತ ಅನೇಕ ಲೇಖನಗಳನ್ನು ಒಳಗೊಂಡ ಸ್ಮರಣ ಸಂಚಿಕೆಯೂ ಸಿದ್ಧವಾಗುತ್ತಿತ್ತು. ರಾಜ್ಯದ ವಿವಿಧ ಮೂಲೆಗಳಿಂದ ಪ್ರತಿನಿಧಿಗಳು, ವೀಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಲು ಉತ್ಸಾಹ ತೋರಿಸುತ್ತಿದ್ದರು.

ಜೂನ್ ಒಂದನೇ ತಾರೀಕಿನ ಬೆಳಗ್ಗೆಯಿಂದಲೂ ಅನೇಕ ಜಿಲ್ಲೆಗಳಿಂದ ಪ್ರತಿನಿಧಿಗಳು ಆಗಮಿಸುತ್ತಿದ್ದರು. ಆ ದಿನ ಸಂಜೆ ಧಾರವಾಡದ ಲಕ್ಷ್ಮಮ್ಮ ಅವರು ಸಂಘಟನೆಯ ಧ್ವಜಾರೋಹಣ ಮಾಡುವುದರ ಮೂಲಕ ಸಮ್ಮೇಳನ ಆರಂಭವಾಯಿತು. ಎನ್. ಗಾಯತ್ರಿದೇವಿ ಎಲ್ಲರನ್ನೂ ಸ್ವಾಗತಿಸಿದರು. ನಂತರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಡಾ. ಅನುಪಮಾ ನಿರಂಜನ ಅವರು ವಹಿಸಿದ್ದರು. ಉದ್ಘಾಟನಾ ಭಾಷಣ ಮಾಡಿದ ಸಂಸತ್ ಸದಸ್ಯೆ ಮತ್ತು ಹೋರಾಟಗಾರ್ತಿ ಸುಶೀಲಾ ಗೋಪಾಲನ್ ಅವರು ದೀರ್ಘ ವಿವರಗಳ ಮೂಲಕ ಮಹಿಳೆಯರ ಶೋಷಣೆಯ ಎಲ್ಲ ಅಂಶಗಳನ್ನೂ ಪರಿಶೀಲಿಸಿದರು.

ಸಮಾಜವಾದಿ ದೇಶಗಳಲ್ಲಿ ಇರುವುದಕ್ಕಿಂತ ಹೆಚ್ಚು ಕಾನೂನುಗಳು ನಮ್ಮ ದೇಶದಲ್ಲಿ ಇವೆ. ಆದರೆ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವಲ್ಲಿ ಅವು ವಿಫಲವಾಗಿವೆ. ಆರನೇ ಯೋಜನೆಯಲ್ಲಿ ಮಹಿಳೆಯರ ಪ್ರಗತಿಗೆ ಸಂಬಂಧಿಸಿದಂತೆ ಯಾವ ಕಾರ್ಯಕ್ರಮಗಳೂ ಇಲ್ಲ. ಅವರು ಮನೆಗೆಲಸದಲ್ಲೇ ನಿರತರಾಗಿರುವಂತೆ ಮಾಡಲು ಕುಟುಂಬ ಎಂಬ ಘಟಕದ ಕಲ್ಯಾಣಕ್ಕೆ ಯೋಜನೆ ತಯಾರಿಸಲಾಗುತ್ತಿದೆ. ರಾಜತಾಂತ್ರಿಕ, ಎಂಜಿನಿಯರಿಂಗ್ ಮುಂತಾದ ವಲಯಗಳಲ್ಲಿ ಈಗಲೂ ಮಹಿಳೆಯರಿಗೆ ಸಮಾನ ಅವಕಾಶಗಳಿಲ್ಲ.

ತಮ್ಮ ಮೇಲೆ ನಡೆಯುತ್ತಿರುವ ಎಲ್ಲ ರೀತಿಯ ದೌರ್ಜನ್ಯಗಳನ್ನು ಎದುರಿಸಲು ಮಹಿಳೆಯರು ಒಂದಾಗಬೇಕು. ಅಡಿಗೆಮನೆಯ ಪ್ರಪಂಚದಿಂದ ಹೊರಬಂದು ಹೋರಾಟದ ದಾರಿಗಳನ್ನು ಕಂಡುಕೊಳ್ಳಬೇಕು ಎಂದು ಸುಶೀಲಾ ತಮ್ಮ ದೀರ್ಘ ಭಾಷಣದಲ್ಲಿ ಸಲಹೆಮಾಡಿದರು.

ಸಮಾಜದಲ್ಲಿ ಹೆಣ್ಣು ಒಂದು ಹೊರೆ ಎಂಬ ಭಾವನೆ ಇದೆ. ಇದಕ್ಕೆ ಕಾರಣಗಳಿಲ್ಲದಿಲ್ಲ. ಹೆಣ್ಣನ್ನು ಬೆಳೆಸುವುದಲ್ಲದೆ ಮದುವೆಮಾಡುವುದಕ್ಕೂ ಕಷ್ಟಪಡಬೇಕು. ಕೇರಳದಲ್ಲಿ ಗಂಡುಮಗು ಹುಟ್ಟಿದರೆ ಸಂತೋಷದ ಶಬ್ದ ಮಾಡುತ್ತಾರೆ. ಹೆಣ್ಣುಮಗು ಹುಟ್ಟಿದರೆ ಸಂತಾಪ ಸೂಚಕ ಶಬ್ದ ಮಾಡುತ್ತಾರೆ. ಹುಟ್ಟಿದುದಿನಿಂದ ಸಾಯುವವರೆಗೂ ದುಡಿಯುತ್ತಲೇ ಇರುವ ಹೆಣ್ಣಿಗೆ ಸಿಗುವುದಾದರೂ ಏನು? ದುಡಿಮೆಯಲ್ಲಿ ಅವಳಿಗೆ ಅರ್ಧಪಾಲು ಇದೆ. ಆದರೆ ಆಸ್ತಿ, ಉತ್ತರಾಧಿಕಾರದಲ್ಲಿ ಅವಳಿಗೆ ಪಾಲು ತೀರ ಅತ್ಯಲ್ಪ. ಇಂಥ ಅಸಮಾನ ಸಮಾಜದ ಬದಲಾವಣೆಗೆ ಹೆಂಗಸರು ಹೋರಾಡಬೇಕು, ಮಹಿಳಾ ಸಂಘಟನೆಗಳು ಈ ದಿಕ್ಕಿನಲ್ಲಿ ಅವರನ್ನು ಪ್ರೇರೇಪಿಸಬೇಕು ಎಂದು ಸುಶೀಲಾ ಕರೆಕೊಟ್ಟರು.

ಕೇರಳದ ಮಹಿಳಾ ಸಂಘಟನೆಯಲ್ಲಿ ಹಲವಾರು ವರ್ಷಗಳ ಅನುಭವ ಇರುವ, ಈಗ ಮಣಿಪಾಲದಲ್ಲಿ ನೆಲೆಸಿರುವ ದೇವಕಿ ವಾರಿಯರ್ ಅವರು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿ ಸಂಘಟನೆ ಎಲ್ಲ ಕಡೆ ಹರಡಲೆಂದು ಆಶಿಸಿದರು. ಅಧ್ಯಕ್ಷ ಭಾಷಣ ಮಾಡಿದ ಡಾ॥ ಅನುಪಮಾ ನಿರಂಜನ ಅವರು ಮಹಿಳೆಯರು ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಹೀಗೆ ಎಲ್ಲ ವಲಯಗಳಲ್ಲೂ ಶೋಷಿತರಾಗುತ್ತಿದ್ದಾರೆ ಎಂಬುದನ್ನು ಸಾಧಾರಪೂರ್ವಕ ವಿವರಿಸಿದರು. ನಂತರ ಎನ್. ಗಾಯತ್ರಿ ಅವರು ವಂದನಾರ್ಪಣೆ ಮಾಡಿದರು.

ಪ್ರತಿನಿಧಿಗಳಿಗೆ ಉಚಿತ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಸ್ವಾಗತ ಸಮಿತಿ ಏರ್ಪಾಟು ಮಾಡಿತ್ತು. ಮಾರನೆಯ ದಿನ ಪ್ರತಿನಿಧಿಗಳ ಸಭೆ ಆರಂಭವಾಯಿತು. ಆ ದಿನ, ಸಮ್ಮೇಳನದ ಚಾಲನಾ ಸಮಿತಿ, ನಿರ್ಣಯಗಳ ಸಮಿತಿ, ಪ್ರತಿನಿಧಿಗಳ ವಿವರಗಳ ಸಮಿತಿ ಮುಂತಾದುವನ್ನು ರಚಿಸಲಾಯಿತು.

ಪ್ರತಿನಿಧಿಗಳ ಸಭೆ, ಸಮ್ಮೇಳನದ ಅತ್ಯಂತ ಜೀವೋತ್ಸಾಹ ತುಂಬಿದ ಭಾಗವಾಗಿತ್ತು. ಕೆಳವರ್ಗಕ್ಕೆ ಸೇರಿದ, ವಿವಿಧ ಕಸುಬುಗಳಲ್ಲಿ ದುಡಿಯುವ ಎಷ್ಟೋ ಮಂದಿ ಅನಕ್ಷರಸ್ಥ ಮಹಿಳೆಯರ ಅನ್ನಿಸಿಕೆಗಳಿಗೆ ಆ ಸಭೆ ಜೀವ ಕೊಟ್ಟಿತು. ದಿನಕ್ಕೆ ಮೂರು ರೂ. ಕೂಲಿ ಪಡೆಯುವ ಹೆಂಗಸರು ಬೆಲೆ ಏರಿಕೆಯ ಈ ದಿನಗಳಲ್ಲಿ ಹೇಗೆ ಸಂಸಾರ ಮಾಡುವುದು ಎಂದು ತಮ್ಮ ತೊಳಲಾಟಕ್ಕೆ ಮಾತುಕೊಟ್ಟರು. ತೆಲುಗು, ತಮಿಳು, ಉರ್ದು ಭಾಷೆಗಳಲ್ಲಿ ಮಾತನಾಡಿದ ಪ್ರತಿನಿಧಿಗಳ ಅನ್ನಿಸಿಕೆಗಳನ್ನು ಕನ್ನಡಕ್ಕೆ ಭಾಷಾಂತರಿಸಲಾಯಿತು. ಸಮ್ಮೇಳನದ ವೇದಿಕೆ ನೀಡಿದ ಅವಕಾಶವನ್ನು ಪ್ರತಿನಿಧಿಗಳು ಸದುಪಯೋಗಪಡಿಸಿಕೊಂಡು ತಮ್ಮ ನೋವುಗಳನ್ನು, ಆಲೋಚನೆಗಳನ್ನು ಇತರರೊಂದಿಗೆ ಹಂಚಿಕೊಂಡರು. ಬೆಲೆಏರಿಕೆ, ಮಹಿಳೆಯರ ಮೇಲಿನ ದೌರ್ಜನ್ಯಗಳು, ವರದಕ್ಷಿಣೆ ಪದ್ಧತಿ, ದೇವದಾಸಿ ಪದ್ಧತಿ ಇವುಗಳನ್ನು ಖಂಡಿಸುವ, ಕುಡಿಯುವ ನೀರು, ಸವಲತ್ತುಗಳ ಜಾರಿ ಇವುಗಳನ್ನು ಒತ್ತಾಯಿಸುವ ನಿರ್ಣಯಗಳನ್ನು ಪ್ರತಿನಿಧಿಗಳು ಸರ್ವಾನುಮತದಿಂದ ಅಂಗೀಕರಿಸಿದರು.

ಬೆಂಗಳೂರಿನ, ರಾಯಚೂರು ಗುಲ್ಬರ್ಗಗಳ ಅನೇಕ ಮಹಿಳೆಯರು ಹೋರಾಟದ ಗೀತೆಗಳನ್ನು ಹಾಡಿ ಸಮ್ಮೇಳನಕ್ಕೆ ಉತ್ಸಾಹ ತುಂಬುತ್ತಿದ್ದರು.

ಜೂನ್ 3ರ ಬೆಳಿಗ್ಗೆ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಜ್ಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಪ್ರಾತಿನಿಧಿಕವಾದದ್ದು ಮತ್ತು ಎಲ್ಲ ಪ್ರತಿನಿಧಿಗಳೂ ತಮ್ಮ ತಮ್ಮ ಪ್ರದೇಶಗಳಲ್ಲಿ ಕಾರ್ಯಶೀಲರಾಗಿ ಸಂಘಟನೆಯನ್ನು ಬೆಳೆಸಬೇಕು ಎಂದು ಎಸ್. ಮಾಲತಿ ಅವರು ಸೂಚಿಸಿದರು. ಆ ದಿನವೂ ಹಲವಾರು ಪ್ರತಿನಿಧಿಗಳು ಮಾತನಾಡಿದರು.

ಸಂಜೆ 4-30ಗೆ ನೂರಾರು ಮಹಿಳೆಯರನ್ನು ಒಳಗೊಂಡ ಮೆರವಣಿಗೆ ಸಭಾಂಗಣದಿಂದ ಹೊರಟು ಮುಖ್ಯ ಬೀದಿಗಳಲ್ಲಿ ನಡೆಯಿತು. ಮಹಿಳೆಯರ ಹಕ್ಕುಗಳಿಗೆ ಒತ್ತಾಯಿಸುವ, ಅವರ ಮೇಲಿನ ದೌರ್ಜನ್ಯಗಳನ್ನು ಖಂಡಿಸುವ ಫಲಕಗಳನ್ನು ಅವರು ಹಿಡಿದಿದ್ದರು. “ಸಮಾನತೆ ನಮ್ಮ ಗುರಿ, ಮಹಿಳಾ ವಿಮೋಚನೆ ನಮ್ಮ ಗುರಿ”, “ವರದಕ್ಷಿಣೆ ಪದ್ಧತಿಗೆ ಧಿಕ್ಕಾರ” “ಸಮಾನ ಕೆಲಸಕ್ಕೆ ಸಮಾನ ವೇತನ” “ಹೆರಿಗೆ ರಜೆ, ಹೆರಿಗೆ ಭತ್ಯೆ ನಮ್ಮ ಹಕ್ಕು ನಮಗೆ ಕೊಡಿ” “ವರದಕ್ಷಿಣೆ ಎಂದರೂ, ಬೆಂಕಿ ಹಚ್ಚಿ ಸುಟ್ಟರು” “ಪ್ರಥಮ ಮಹಿಳಾ ಸಮ್ಮೇಳನಕ್ಕೆ ಜಯವಾಗಲಿ” ಮುಂತಾದ ಘೋಷಣೆಗಳನ್ನು ಮೆರವಣಿಗೆಕಾರರು ಕೂಗುತ್ತಾ ಮಹಿಳೆಯರ ಒಗ್ಗಟ್ಟಿಗೆ ಕರೆಕೊಡುತ್ತಿದ್ದರು. ಬೀಡಿ ಮುಂತಾದ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರು, ಮುಸ್ಲಿಮ್ ಮಹಿಳೆಯರು, ಮಕ್ಕಳ ತಾಯಂದಿರು ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಬಂದಿದ್ದರು. ಸುಶೀಲಾ ಗೋಪಾಲನ್, ದೇವಕಿವಾರಿಯರ್, ಮೇರಿ ದೇವಾಸಿಯಾ, ವಿಮಲ ರಣದಿವೆ ಮುಂತಾದವರೂ ಮೆರವಣಿಗೆಯ ಉದ್ದಕ್ಕೂ ಕಾಲ್ನಡಿಗೆಯಲ್ಲಿ ಬಂದಿದ್ದರು. ನಗರದ ಮುಖ್ಯಬೀದಿಗಳಲ್ಲಿ ಸಂಚರಿಸಿದ ನಂತರ ಮೆರವಣಿಗೆ ಚಿಕ್ಕಲಾಲ್‌ಬಾಗ್‌ನ ಬಹಿರಂಗ ಸಭೆಯ ಸ್ಥಳಕ್ಕೆ ಬಂದಿತು. ಚಿಕ್ಕಲಾಲ್‌ಬಾಗ್ ಪ್ರವೇಶಿಸುವಾಗ, ತುಂತುರುಮಳೆ, ಸೋದರ ಸಂಗಾತಿಗಳ ಜಯಘೋಷಣೆ, ಪುಷ್ಪವೃಷ್ಟಿಗಳು ಮೆರವಣಿಗೆಯಲ್ಲಿ ಬಂದವರನ್ನು ಸ್ವಾಗತಿಸಿದವು.

ಬಹಿರಂಗಸಭೆಯಲ್ಲಿ ಮೊದಲಿಗೆ ಆರ್. ಪೂರ್ಣಿಮಾ ಅವರು ಎಲ್ಲರನ್ನೂ ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ಮೇರಿ ದೇವಾಸಿಯಾ ಅವರು ವಹಿಸಿದ್ದರು. ಸಂಘಟನೆಯ ಧ್ಯೇಯೋದ್ದೇಶಗಳನ್ನು ಮಹಿಳೆಯರ ಸ್ಥಿತಿಗತಿಗಳನ್ನು ಕುರಿತು ಸುಶೀಲಾಗೋಪಾಲನ್ ಅವರು ಮಾತನಾಡಿದರು. ವಿಮಲ ರಣದಿವೆ ಅವರು ಮಹಿಳೆಯ ಉದ್ಯೋಗವಲಯದ ತೊಂದರೆಗಳನ್ನು ವಿವರಿಸಿದರು. ಸಭೆಯಲ್ಲಿ ಮೇರಿ ದೇವಾಸಿಯಾ, ದೇವಕಿ ವಾರಿಯರ್ ಮತ್ತು ಇತರರು ಮಾತನಾಡಿದರು.

ಹಲವು ಜಿಲ್ಲೆಗಳಲ್ಲಿ ಬೇರೆಬೇರೆ ಹೆಸರುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಗತಿಪರ ಮಹಿಳೆಯರು ಒಂದೇ ಹೆಸರಿನಡಿ ಸಂಘಟಿತರಾಗುವ ಮಹತ್ವದ ಘಟನೆ ಈ ಸಮಾವೇಶದಿಂದ ಸಾಧ್ಯವಾಯಿತು. ಮಹಿಳೆಯರ ಪ್ರಗತಿಗಾಗಿ ಉನ್ನತ ಧ್ಯೇಯೋದ್ದೇಶಗಳನ್ನು ಇರಿಸಿಕೊಂಡಿರುವ ಈ ಸಂಘಟನೆ ಮಹಿಳೆಯರನ್ನು ಎಚ್ಚರಿಸಿ ಅವರನ್ನು ಹೋರಾಟಕ್ಕೆ ಪ್ರೇರೇಪಿಸುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳಲಿದೆ.

○

ಬೀಡಿ ಕಾರ್ಮಿಕರ ವಾರ್ಷಿಕ ಮಹಾಸಭೆ

31-5-81ರಂದು ಸಿ.ಐ.ಟಿ.ಯು. ನೇತೃತ್ವದಲ್ಲಿರುವ ಮಂಗಳೂರು ಬೀಡಿಕೆಲಸಗಾರರ ಸಂಘದ ವಾರ್ಷಿಕ ಮಹಾಸಭೆಯು ಮಂಗಳೂರಿನ ಗಣಪತಿ ಹೈಸ್ಕೂಲಿನ ಹಾಲಿನಲ್ಲಿ ನೆರವೇರಿತು. ಕಾಂ. ಪಿ. ರಾಮಚಂದ್ರ ರಾಯರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ದೀರ್ಘಕಾಲದಿಂದ ಬೀಡಿಕೆಲಸಗಾರರ ಸಂಘದ ಅಧ್ಯಕ್ಷರಾಗಿ, ಸಂಘಟನೆಯನ್ನು ಬೆಳೆಸುವಲ್ಲಿ ಅಪಾರವಾಗಿ ಶ್ರಮಿಸಿದ ದಿವಂಗತ ಕಾಂ. ಎ. ಕೆ. ನಾರಾಯಣರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಂಘದ ಕಾರ್ಯದರ್ಶಿ ಕಾಂ. ಜೆ. ವೀರಪ್ಪನವರು ಸಂಘದ ಚಟುವಟಿಕೆಯ ವರದಿಯನ್ನಿತ್ತರು. ಖಜಾಂಚಿಯಾದ ಕಮಲಾಕ್ಷಬಂಗೇರರು ಮಂಡಿಸಿದ ಲೆಕ್ಕಪತ್ರವನ್ನು ಸಭೆ ಮಂಜೂರು ಮಾಡಿತು.

ಬೀಡಿಕಾರ್ಮಿಕರಿಗೆ ಕನಿಷ್ಟ ಕೂಲಿ, ಕೆಲಸವಿಲ್ಲದ ಸಮಯದಲ್ಲಿ ಕಾರ್ಮಿಕರಿಗೆ ಪರಿಹಾರ, ಎಲೆ ಆ್ಯವರೇಜ್ ಹೆಸರಿನಲ್ಲಿ ಕಾರ್ಮಿಕರ ಕೂಲಿಯಲ್ಲಿ ಕಡಿತ ಮಾಡುವ ಖಂಡಿಸುವ ಮೊದಲಾದ ನಿರ್ಣಯಗಳನ್ನು ಸಭೆ ಅಂಗೀಕರಿಸಿತು. ಅಲ್ಲದೇ ಬೋಳಾರದಲ್ಲಿರುವ ಕೆನರಾ ಹಂಚಿನ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಲಾಯಿತು.

ಬಂಟ್ವಾಳ್ ಬೀಡಿಕೆಲಸಗಾರರ ಸಂಘದ ಪರವಾಗಿ ಕಾಂ. ಬಿ. ವಾಸುಗಟ್ಟಿ, ಅಳಪೆ ಬೀಡಿಕೆಲಸಗಾರರ ಸಂಘದ ಪರವಾಗಿ ಪೂವಪ್ಪಸಾಲಿಯಾನ್, ಕ್ಯಾಶು ಕಾರ್ಮಿಕರ ಪರವಾಗಿ ಎ. ಜಾನಮ್ಮ, ಬಂದರು ಕೆಲಸಗಾರರ ಸಂಘದ ಪರವಾಗಿ ಮಾರಪ್ಪ, ವಿದ್ಯಾರ್ಥಿ ಸಂಘಟನೆಯ ಪರವಾಗಿ ಕಾಂ. ಉಮೇಶ ಮೊದಲಾದವರು ಮಹಾಸಭೆಗೆ ಶುಭಸಂದೇಶವನ್ನಿತ್ತರು.

ಕಾಂ. ಪಿ. ಆರ್. ಮಾತನಾಡುತ್ತ “ಲಕ್ಷಾಂತರ ಬೀಡಿ ಕಾರ್ಮಿಕರು ನಮ್ಮ ರಾಜ್ಯದಲ್ಲಿರುವರು. ಅಪಾರವಾಗಿ ಸಂಕಷ್ಟದಲ್ಲಿರುವರು. ಇವರನ್ನೆಲ್ಲ ಸಂಘಟಿಸುವ ಹೊಣೆ ನಮ್ಮ ಮೇಲಿದೆ. ಸ್ವಾತಂತ್ರ್ಯದೊರೆತು 33 ವರ್ಷಗಳು ಕಳೆದರೂ ಇಂದು ಯಾವುದೇ ಸಮಸ್ಯೆಗಳೂ ಬಗೆಹರಿದಿಲ್ಲ. ಸಂಘಟಿತರಾಗಿ ಹೋರಾಟ ಮಾಡುವುದರಿಂದ ಮಾತ್ರ ನಮ್ಮನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ” ಎಂದರು.

ಕೊನೆಯಲ್ಲಿ ಸಂಘಕ್ಕೆ ಕೆಳಕಂಡ ಹೊಸ ಅಧಿಕಾರವರ್ಗವನ್ನು ಚುನಾಯಿಸಲಾಯಿತು. ಕಾಂ. ಎ. ಲೋಕಯ್ಯಶೆಟ್ಟಿ (ಅಧ್ಯಕ್ಷ), ಕಾಂ. ಖಾದ್ರಿ ಮತ್ತು ಕಾಂ. ಎನ್. ಬಾಲಕೃಷ್ಣಶೆಟ್ಟಿ ಮತ್ತು ಸೇಸಮ್ಮ (ಉಪಾಧ್ಯಕ್ಷರು), ಪ್ರಧಾನಕಾರ್ಯದರ್ಶಿಯಾಗಿ ಕಾಂ. ಜೆ. ವೀರಪ್ಪ, ಸಹಕಾರ್ಯದರ್ಶಿಗಳಾಗಿ ಕಾಂ. ನಾರಾಯಣರಾವ್ ಮತ್ತು ಎನ್. ಗೋಪಾಲ, ಕೋಶಾಧಿಕಾರಿಯಾಗಿ ಕಾಂ. ಕಮಲಾಕ್ಷಬಂಗೇರ ಮತ್ತು 21 ಮಂದಿ ಕಾರ್ಯಕಾರಿ ಸಮಿತಿಯ ಸದಸ್ಯರು.

●

ಸಂಯುಕ್ತ ಕಾರ್ಯಾಚರಣೆಯಲ್ಲೊಂದು ಹೊಸ ಅಧ್ಯಾಯ

ಮುಂಬೈ ಸಮಾವೇಶ

–ವಿ. ಜೆ. ಕೆ. ನಾಯರ್

ಜೂನ್ 4, 1981ರಂದು ದೇಶದ ಕಾರ್ಮಿಕರ ಸಂಯುಕ್ತ ಕಾರ್ಯಾಚರಣೆಯಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು. ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳ, ರಾಷ್ಟ್ರೀಯ ಒಕ್ಕೂಟಗಳ, ಸ್ವತಂತ್ರ ಕಾರ್ಮಿಕ ಸಂಘಟನೆಗಳ ಸಂಯುಕ್ತ ಸಮಾವೇಶ ಮುಂಬೈನಲ್ಲಿ ಜರುಗಿತು.

ಬೆಲೆಏರಿಕೆ ವಿರುದ್ಧ, ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ಧೋರಣೆಯ ವಿರುದ್ಧ ಮುಂಬೈನ ಷಣ್ಮುಖಾನಂದ ಸಭಾಭವನದಲ್ಲಿ ಈ ಸಮಾವೇಶ ನಡೆಯಿತು. ಸಭಾಸ್ಥಳಕ್ಕೆ ಇತ್ತೀಚೆಗೆ ನಿಧನರಾದ ಕಾರ್ಮಿಕ ನಾಯಕ ಬಾಲ್‌ದಂಡವತೆಯವರ ಸ್ಮರಣಾರ್ಥ "ಬಾಲ್ ದಂಡವತೆ ನಗರ" ಎಂದು ಹೆಸರಿಡಲಾಗಿತ್ತು. ದೇಶದಾದ್ಯಂತದಿಂದ 5000 ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

ಬೆಲೆಏರಿಕೆಯ ವಿರುದ್ಧ ಹೋರಾಡಲು ಸಿದ್ಧರಾಗುವಂತೆ, ಅಲ್ಲದೆ ಈ ಕೆಳಕಂಡ ಬೇಡಿಕೆಗಳ ಬಗ್ಗೆ ಒತ್ತಾಯಿಸುವಂತೆ ಸಮಾವೇಶವು ದೇಶದ ಸಮಗ್ರ ಕಾರ್ಮಿಕವರ್ಗಕ್ಕೆ ಕರೆ ಕೊಟ್ಟಿತು.

1. ಜೀವನಾವಶ್ಯಕ ಸಾಮಗ್ರಿಗಳಾದ ಆಹಾರಧಾನ್ಯ, ಎಣ್ಣೆ, ಬಟ್ಟೆ, ಸಕ್ಕರೆ ಮತ್ತಿತರ ವಸ್ತುಗಳನ್ನು ಕಮ್ಮಿಬೆಲೆಯಲ್ಲಿ (Subsidised Prices) ಚುನಾಯಿತ ಗ್ರಾಹಕರ ಮಂಡಳಿಗಳ ಹಿರಿತನದಲ್ಲಿ ಸಾರ್ವಜನಿಕ ವಿತರಣೆಯಾಗುವಂತೆ ಕ್ರಮವಹಿಸಬೇಕು.

2. ರೈತನು ಬೆಳೆದ ಬೆಳೆಗಳಿಗೆ ನ್ಯಾಯವಾದ ಬೆಲೆ ಮತ್ತು ಕೃಷಿ ಕೂಲಿಕಾರರಿಗೆ ಹೆಚ್ಚಿನ ವೇತನ.

3. ಕಳ್ಳಸಾಗಾಣಿಕೆದಾರರಿಗೆ, ಅಕ್ರಮ ದಾಸ್ತಾನುದಾರರಿಗೆ, ಪರೋಕ್ಷವಾಗಿ ಇವರಿಗೆ ಕುಮ್ಮಕ್ಕು ಕೊಡುವ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು.

ಅಲ್ಲದೇ ಈ ಕೆಳಕಂಡ ಆರ್ಥಿಕ ಮತ್ತು ಟ್ರೇಡ್‌ಯೂನಿಯನ್ ಹಕ್ಕುಗಳಿಗಾಗಿ ಬೇಡಿಕೆಗಳನ್ನು ಮುಂದಿಡುವಂತೆ ಸಮಾವೇಶವು ಕರೆಕೊಟ್ಟಿತು.

1. 15ನೇ ಭಾರತದ ಕಾರ್ಮಿಕ ಸಮ್ಮೇಳನ (15th Indian Labour Conference) ದಲ್ಲಿ ಮಂಡಿಸಿದ ಆಧಾರದ ಮೇಲೆ ಕನಿಷ್ಠ ಜೀವನಾವಶ್ಯಕ ವೇತನ ದೊರೆಯಬೇಕು.

2. ಬೆಲೆ ಸೂಚ್ಯಂಕವನ್ನು ಏರದಂತೆ ತಡೆಗಟ್ಟಬೇಕು. ಮತ್ತು ಬೆಲೆ ಸೂಚ್ಯಂಕ (1960ರ ಆಧಾರ)ವನ್ನು ಪಾಯಿಂಟಿಗೆ ರೂ. 1-30ರಂತೆ ಬಿ.ಪಿ.ಇ. ಸ್ವೇಚ್ಛೆಯಾಗಿ ನಿಗದಿಪಡಿಸಿರುವುದನ್ನು ಪುನಃ ವಿಮರ್ಶಿಸಬೇಕು.

3. ರಿಟ್ರೆಂಚ್‌ಮೆಂಟ್‌ಗಳನ್ನು ರದ್ದುಗೊಳಿಸಬೇಕು. ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ತೆ ಕೊಡುವುದನ್ನು ಪ್ರಾರಂಭಿಸಬೇಕು.

4. ಕಾರ್ಮಿಕರ ಮೇಲೆ, ಟ್ರೇಡ್ ಯೂನಿಯನ್ ಸಕ್ರಿಯ ಕಾರ್ಯಕರ್ತರ ಮೇಲೆ ಇರುವ ಎಲ್ಲ ದಬ್ಬಾಳಿಕೆ ಕ್ರಮಗಳನ್ನು ಕೈಬಿಡಬೇಕು.

5. ರಹಸ್ಯ ಮತದಾನದ ಮೂಲಕ ಕಾರ್ಮಿಕ ಸಂಘಗಳನ್ನು ಮಾನ್ಯತೆಮಾಡಬೇಕು.

6. ಯಾವುದೇ ತಾರತಮ್ಯವಿಲ್ಲದೆ ಸಾಮೂಹಿಕ ಚೌಕಾಶಿ, ಮತ್ತು ಕಾರ್ಮಿಕ ಸಂಘಟನೆಯ ಹಕ್ಕುಗಳಿಗೆ ಚ್ಯುತಿ ತರಕೂಡದು.

7. ಎನ್. ಎಸ್. ಎ. ಮತ್ತು ಇತರ ದಬ್ಬಾಳಿಕೆ ಕ್ರಮಗಳನ್ನು ರದ್ದು ಮಾಡಬೇಕು.

ಈ ಬೇಡಿಕೆಗಳನ್ನು ಕಾರ್ಮಿಕರ ಮಧ್ಯೆ ಪ್ರಬಲಪಡಿಸಲು ವಿವಿಧ ರಾಜ್ಯವಾರು, ವಿಭಾಗವಾರು ಸಮಾವೇಶಗಳನ್ನು ಮುಂದಿನ ಮೂರು ತಿಂಗಳ ಅವಧಿಯಲ್ಲಿ ಜರುಗಿಸಲು ವ್ಯವಸ್ಥೆ ಮಾಡುವಂತೆ ಸಮಾವೇಶ ಕರೆಕೊಟ್ಟಿತು. ಈ ಸಂಬಂಧದಲ್ಲಿ ಕೆಳಕಂಡ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

i) ಅಖಿಲಭಾರತ ಬೇಡಿಕೆ ಮತ್ತು ಪ್ರತಿಭಟನಾ ದಿನ ಆಚರಿಸುವದು.
ii) ಲೋಕಸಭೆಗೆ ಬೃಹತ್ ಕಾರ್ಮಿಕ ರ್‍ಯಾಲಿ ಕೊಂಡೊಯ್ಯುವದು. (March to Parliament)
iii) ದೇಶದಾದ್ಯಂತ ಒಂದುದಿನದ ಸಾಂಕೇತಿಕ ಮುಷ್ಕರವನ್ನಾಚರಿಸುವದು.

ಸಮಾವೇಶದ ಕಲಾಪಗಳನ್ನು ಕೇಂದ್ರ ಸಂಘಟನೆಗಳ ತಲಾ ಒಬ್ಬೊಬ್ಬ ಪ್ರತಿನಿಧಿಗಳನ್ನೊಳಗೊಂಡ ಅಧ್ಯಕ್ಷ ಮಂಡಳಿ ನಿರ್ವಹಿಸಿತು.

ಪ್ರಾರಂಭದಲ್ಲಿ ಸಿ.ಐ.ಟಿ.ಯು.ವಿನ ಮಹಾರಾಷ್ಟ್ರ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ಕೆ. ಕುರಣೆ ಸ್ವಾಗತಿಸಿದರು. ಇತ್ತೀಚಿನ ದಿನಗಳಲ್ಲಿ ದೇಶದಾದ್ಯಂತ ಬೆಳೆದುಬರುತ್ತಿರುವ ಕಾರ್ಮಿಕ ಹೋರಾಟಗಳನ್ನು ಪ್ರಸ್ತಾಪಿಸಿದರು. ಪ. ಬಂಗಾಳ, ತ್ರಿಪುರಾ ಮತ್ತು ಕೇರಳಗಳ ಕಾರ್ಮಿಕವರ್ಗ ಸರ್ವಾಧಿಕಾರಿ ಇಂದಿರಾಗಾಂಧಿಯವರನ್ನು ದಿಟ್ಟತನದಿಂದ ಎದುರಿಸಿರುವುದಕ್ಕೆ, ಅಸ್ಸಾಂನ ಸಂಕುಚಿತವಾದಿ (Chauvenists)ಗಳ ಹಲ್ಲೆಯನ್ನು ದಿಟ್ಟತನದಿಂದ ಎದುರಿಸಿದ ಅಸ್ಸಾಂ ಕಾರ್ಮಿಕ ವರ್ಗಕ್ಕೆ, ಕರ್ನಾಟಕದ ಕಾರ್ಮಿಕರು ರೈತ-ಕಾರ್ಮಿಕರ ಐಕ್ಯತೆ ಸಾಧಿಸಿರುವುದನ್ನು ಕಾಂ. ಕುರಣೆ ಪ್ರಸ್ತಾಪಿಸಿ ಪ್ರತ್ಯೇಕ ಪ್ರತ್ಯೇಕ ಅಭಿನಂದನೆಗಳನ್ನು ಸಲ್ಲಿಸಿದಾಗ ನೆರೆದಿದ್ದ 5000 ಪ್ರತಿನಿಧಿಗಳು ಹರ್ಷೋದ್ಗಾರ ಹೊರಡಿಸಿದರು.

ಸಮಾವೇಶದ ಮುಖ್ಯ ನಿರ್ಣಯವನ್ನು ಸಿ.ಐ.ಟಿ.ಯು.ವಿನ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿಯವರು ಮಂಡಿಸಿದರು. ಈ ಕುರಿತು ಕಾಂ. ಪಿ. ಆರ್. ಮಾತನಾಡುತ್ತಾ ಬೆಲೆ ಏರಿಕೆಯನ್ನು ಕಾರ್ಮಿಕರು ಸೃಷ್ಟಿಸಿದ್ದಲ್ಲ. ಕಾಳಸಂತೆ, ಕಾಳಧನ, ಗುತ್ತೇದಾರಿ ವ್ಯಾಪಾರಕ್ಕೆ ಕಾರ್ಮಿಕರು ಕಾರಣರಲ್ಲ. ಸಮಾಜದ ಯಾವದೇ ರೋಗಕ್ಕೂ ಕಾರ್ಮಿಕರು ಕಾರಣರಲ್ಲ. ಜಗತ್ತಿನ ಗುತ್ತೇದಾರಿಗಳು ಮತ್ತವರ ಸಹವರ್ತಿಗಳಾದ ನಮ್ಮ ದೇಶದ ಗುತ್ತೇದಾರಿಗಳು ನಮ್ಮ ಸಮಾಜವನ್ನು ಬಾಧಿಸುತ್ತಿರುವ ಈ ಬೆಲೆಏರಿಕೆ ಮತ್ತಿತರ ವ್ಯಾಧಿಗಳಿಗೆ ಕಾರಣಕರ್ತರು". ಅವರು ಮುಂದುವರೆದು "ಸ್ವತಂತ್ರಭಾರತ ಸರಕಾರ ಪ್ರತಿವಸ್ತುವಿನ ಮೇಲೂ ಅಪ್ರತ್ಯಕ್ಷ ತೆರಿಗೆಗಳನ್ನು ಹಾಕಿ ಜನತೆಯನ್ನು ಸುಲಿಗೆ ಮಾಡುತ್ತಿದೆ" ಎಂದರು. ಮಹಾತ್ಮಗಾಂಧಿಯವರ ದಾಂಡಿ–ಯಾತ್ರೆ (ಉಪ್ಪಿನ ಸತ್ಯಾಗ್ರಹ)ಯನ್ನು ಪ್ರಸ್ತಾಪಿಸಿದ ಕಾಂ. ಪಿ. ಆರ್, ಉಪ್ಪಿನ ಮೇಲಿನ ತೆರಿಗೆ ಇಂದಿಗೂ ಹಾಗೆಯೇ ಉಳಿದಿರುವುದಲ್ಲದೇ ಉಪ್ಪಿನ ಮೇಲಿನ ತೆರಿಗೆ ಹೆಚ್ಚಾಗಿದೆ ಎಂದರು. ಸಮಾಜವಾದವನ್ನು ಕುರಿತು ಮಾತನಾಡುವ ಸರಕಾರವು ಸಾರ್ವಜನಿಕರ ಅನುಕೂಲತೆಗೆ ಸಹಾಯಮಾಡುವ ಬದಲು ರಫ್ತುಮಾಡುವಲ್ಲಿ ಮುಂದಾಗುತ್ತಿದೆ. ಪರಿಣಾಮವಾಗಿ ಮಾರುಕಟ್ಟೆಯಲ್ಲಿ ಜೀವನಾವಶ್ಯಕ ವಸ್ತುಗಳು ದುರ್ಲಭವಾಗುತ್ತಿವೆ ಎಂದರು.

ಅವರು ಮುಂದುವರೆದು, "ಕಾರ್ಮಿಕರ ಸಾಮೂಹಿಕ ಚೌಕಾಶಿ, ಮತ್ತಿತರ ಟ್ರೇಡ್‌ಯೂನಿಯನ್ ಹಕ್ಕುಗಳನ್ನು ಕಿತ್ತುಕೊಳ್ಳಲು ಹವಣಿಸುತ್ತಿದೆ. ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲುಯಾವುದೇ ಒಬ್ಬ ವ್ಯಕ್ತಿಯನ್ನು ಅವಲಂಬಿಸದೇ ತಾವೇ ಶೋಷಣೆಯ ಹಿಡಿತದಿಂದ ಹೊರಬಂದು ಸ್ವತಂತ್ರರಾಗಬೇಕು" ಎಂದರು.

ಕಾಂ. ಪಿ. ಆರ್. ಮಾತನಾಡಿದ ನಂತರ ಎಚ್. ಎಂ. ಎಸ್. ನ ಕಾಂ. ಶಾಂತಿಪಟೇಲ್ ಮಾತನಾಡಿದರು. ಕೇವಲ ಒಂದೇ ವರ್ಷದಲ್ಲಿ ಬೆಲೆಯ ಸೂಚ್ಯಂಕದಲ್ಲಿ 20 ಪಾಯಿಂಟ್‌ಗಳು ಹೆಚ್ಚಾಗಿರುವುದರ ಕುರಿತು ಪ್ರತಿನಿಧಿಗಳ ಗಮನಸೆಳೆದರು. ಮುಂಬೈ ನಗರದ ಪರಂಪರೆ ಕುರಿತು ಮಾತನಾಡಿದ ಕಾಂ. ಪಟೇಲ್, 1885ರಲ್ಲಿ ಮುಂಬೈನಲ್ಲಿ ಜನ್ಮತಳೆದ ಕಾಂಗ್ರೆಸ್ ಬ್ರಿಟಿಷರನ್ನು ಹೊರದೂಡುವಲ್ಲಿ ಮುಖ್ಯ ಪಾತ್ರವಹಿಸಿದ್ದನ್ನು ಸ್ಮರಿಸುತ್ತಾ ಪ್ರಸಕ್ತ ಈ ಸಂಯುಕ್ತ ಕಾರ್ಯಾಚರಣೆ ವ್ಯಾಪಿಸಿ ದೇಶದ ಬಂಡವಾಳಶಾಹಿ ಆಡಳಿತೆಯನ್ನು ಕಿತ್ತೊಗೆಯಲಿ ಎಂದು ಆಶಿಸಿದರು.

ನಂತರ ಮಾತನಾಡಿದ ಎ.ಐ.ಟಿ.ಯು.ಸಿ. ಪ್ರಧಾನಕಾರ್ಯದರ್ಶಿ ಕಾಂ. ಇಂದ್ರಜಿತ್‌ಗುಪ್ತಾ ಮಾತನಾಡುತ್ತಾ, ಕೈಗಾರಿಕಾ ಬಾಂಧವ್ಯ ಮಸೂದೆಯ (Industrial Relation Bill) ವಿರುದ್ಧ ನಡೆದ ಸಂಯುಕ್ತ ಕಾರ್ಯಾಚರಣೆಯನ್ನು ಜ್ಞಾಪಿಸಿದರು. 1978ರಲ್ಲಿ ನಡೆದ ಸಂಯುಕ್ತ ಕಾರ್ಯಾಚರಣೆ ಕೇವಲ ಒಂದು ಕುಖ್ಯಾತ ಕಾನೂನಿಗೆ ವಿರುದ್ಧವಾಗಿ ನಡೆದಿತ್ತು. ಆದರೆ ಈಗ ಆಳುವವರ್ಗದ ಜನವಿರೋಧಿ ಧೋರಣೆಗಳ ಬಗ್ಗೆ ನಡೆಯಬೇಕಾಗಿದೆ ಎಂದರು.

ಇವರುಗಳಲ್ಲದೇ ದತ್ತಪ್ಪ ತೇಂಗಡಿ (ಬಿ. ಎಂ. ಎಸ್.), ಜತೀನ್ ಚಕ್ರವರ್ತಿ (ಯು.ಟಿ.ಯು.ಸಿ.). ಪ್ರತೀಶ್ ಚಂದ್ರ (ಯು.ಟಿ.ಯು.ಸಿ. ಲೆನಿನ್ ಸರಣಿ), ಶ್ರೀಕಂಠನ್ ನಾಯರ್ (ಯು.ಟಿ.ಯು.ಸಿ.) ಮತ್ತು ಜೆ.ಎಸ್. ಧಾರಾ(ಐ.ಎನ್.ಟಿ.ಯು.ಸಿ.–ದಾರಾ ಗುಂಪು) ಇವರುಗಳು ಮಾತನಾಡಿದರು. ಕೇಂದ್ರ ಸಂಘಟನೆಗಳ ಪ್ರತಿನಿಧಿಗಳ ನಂತರ ರಾಷ್ಟ್ರೀಯ ಒಕ್ಕೂಟಗಳ ಧುರೀಣರು ಮಾತನಾಡಿದರು. ಅವರ ನಂತರ ನಮ್ಮ ರಾಜ್ಯದ ಪರವಾಗಿ ಕಾಂ. ಎಸ್. ಸೂರ್ಯನಾರಾಯಣರಾವ್, ಎಂ. ಎಸ್. ಕೃಷ್ಣನ್, ಮೈಕಲ್ ಫರ್ನಾಂಡೀಸ್ ಮಾತನಾಡಿದರು.

ಕಾಂ. ಪಿ. ರಾಮಮೂರ್ತಿಯವರು ನಿರ್ಣಯದ ಕುರಿತು ನಡೆದ ಚರ್ಚೆಗೆ ಉತ್ತರಿಸಿದರು. ಶೇಕಡ 8.33 ಬೋನಸ್ ಬದಲಾಗಿ ಶೇಕಡ 10 ರಂತೆ ಬೋನಸ್ ಬೇಡಿಕೆ ಮಂಡಿಸಬೇಕೆನ್ನುವ ಅಂಶವನ್ನು ಒಪ್ಪಿಕೊಳ್ಳುತ್ತಾ ಈ ಕುರಿತು ಬೋನಸ್ ಕಾಯ್ದೆಯಲ್ಲಿ ತಿದ್ದುಪಡಿಗೆ ಯತ್ನಿಸಬೇಕೆಂದರು. ಅವರು ಮುಂದುವರೆದು 1981ರ ನವೆಂಬರ್ ತಿಂಗಳಲ್ಲಿ ಲೋಕಸಭೆಗೆ ಕೊಂಡೊಯ್ಯಲಿರುವ ರ್‍ಯಾಲಿ ಸಮಯದಲ್ಲಿ ಅಖಿಲ ಭಾರತ ಬಂದ್‌ಗೆ ದಿನವನ್ನು ನಿಗದಿಪಡಿಸಲಾಗುವುದೆಂದರು. ಪೂರ್ವಭಾವೀ ಸಿದ್ಧತೆಗಳು ಸಾಕಷ್ಟು ನಡೆಯಬೇಕಾಗಿರುವುದರಿಂದ ದಿನಾಂಕವನ್ನು ಮೊದಲೇ ನಿಗದಿಪಡಿಸಲಿಲ್ಲ.

ಐಕ್ಯತೆಯ ಅಗತ್ಯವನ್ನು ಸಮಾವೇಶವು ಒತ್ತಿ ತೋರಿಸಿತು. ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳ ಒಕ್ಕೂಟವೊಂದನ್ನು ರಚಿಸುವ ಅಗತ್ಯವನ್ನು ಪ್ರಸ್ತಾಪಿಸಿದ ಕಾಂ. ಪಿ.ಆರ್. ಈ ಕುರಿತ ಎಲ್ಲ ಕೇಂದ್ರ ಸಂಘಟನೆಗಳು ಯೋಚಿಸಬೇಕೆಂದರು.

ಸಮಾವೇಶವು ನಿರ್ಣಯವನ್ನು ತಿದ್ದುಪಡಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ಅತ್ಯಂತ ಯಶಸ್ವಿಯಾಗಿ ಈ ಸಮಾವೇಶವು ಕೊನೆಗೊಂಡಿತು. ಕೊನೆಯಲ್ಲಿ ಬೃಹತ್ ರ್‍ಯಾಲಿಯನ್ನು ಸಂಘಟಿಸಲಾಗಿತ್ತು.

ಕರ್ನಾಟಕದ ಸಿ.ಐ.ಟಿ.ಯು. ಪರವಾಗಿ 25 ಪ್ರತಿನಿಧಿಗಳು ಭಾಗವಹಿಸಿದ್ದರು. ಅವರು ಅಪಾರ ಸ್ಫೂರ್ತಿಯೊಂದಿಗೆ ಮರಳಿದ್ದಾರೆ. ಅವರು ತಮ್ಮ ಅನುಭವ ಮತ್ತು ಅವರ ಸ್ಫೂರ್ತಿಯನ್ನು ಕರ್ನಾಟಕದ ಕಾರ್ಮಿಕರ ಮಧ್ಯೆ ಕೊಂಡೊಯ್ದು ಇಡೀ ರಾಜ್ಯದ ಜನತೆಯನ್ನು ಒಗ್ಗೂಡಿಸಿ ಐಕ್ಯಹೋರಾಟದತ್ತ ಮುನ್ನಡೆಯಲು ಸಹಾಯಕವಾಗಲಿ.

○

ಕಾಂ. ಗುರುಬಕ್ಷಸಿಂಗ್ ಸಿ.ಪಿ.ಐ.(ಎಂ)ಗೆ

ಸಿ. ಪಿ. ಐ. (ಎಂ.ಎಲ್.) ಪಕ್ಷದ ಪಿ. ಬಿ. ಸದಸ್ಯರಾದ ಕಾಂ. ಗುರುಬಕ್ಷಸಿಂಗರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷಕ್ಕೆ ಮರಳಿದ್ದಾರೆ. ಈ ನಿಮಿತ್ತ ಸುದೀರ್ಘ ಹೇಳಿಕೆಯನ್ನು ಹೊರಡಿಸಿರುವ ಕಾಂ. ಗುರುಬಕ್ಷಸಿಂಗರು, ನಕ್ಸಲ್‌ವಾದಿಗಳು ಎಡ ಸಾಹಸವಾದವನ್ನು ಅನುಸರಿಸುತ್ತಾ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವೈಜ್ಞಾನಿಕ ದೃಷ್ಟಿಕೋನದಿಂದ ತುಂಬ ದೂರ ಸರಿದಿದ್ದಾರೆ ಎಂದು ತಿಳಿಸಿರುವರು.

ಸದ್ಯಕ್ಕೆ ನಾನು ಜೆಮ್‌ಶೇಟ್‌ಪುರದ ಕಾರ್ಮಿಕರ ಮಧ್ಯೆ ಕೆಲಸಮಾಡುತ್ತಿದ್ದು ನನ್ನೊಂದಿಗೆ ಬಿಹಾರ್ ಪಿ. ಓ. ಸಿ. ಸದಸ್ಯ ಕಾಂ. ಗೋಪಾಲ್ ರಾವ್ ಮತ್ತಿತರರು ಸಹ ನನ್ನೊಂದಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಬಂದಿದ್ದಾರೆ ಎಂದು ತಿಳಿಸಿರುವರು.

ಬಲ ಪರಿಷ್ಕರಣವಾದದ ವಿರುದ್ಧ ಮತ್ತು ಎಡ ಸಾಹಸವಾದದ ವಿರುದ್ಧ ಸಿ. ಪಿ. ಐ.(ಎಂ) ಹೋರಾಡುತ್ತಿದ್ದು, ಸಿ. ಪಿ. ಐ. (ಎಂ) ಕಾರ್ಯಕ್ರಮ ಮಾತ್ರ ಭಾರತದ ಸಮಾಜದ ವಿವಿಧ ವೈರುಧ್ಯಗಳನ್ನು, ಕ್ರಾಂತಿಯ ಶತ್ರುಗಳನ್ನು ಸ್ನೇಹಿತರನ್ನು ನಿಖರವಾಗಿ ಗುರುತಿಸಿದೆ ಎಂದಿದ್ದಾರೆ. ○

ಐರ್ಲೆಂಡ್ - ಹೋರಾಟದ ಸದ್ಯದ ಹಂತ

[ಹಿಂದಿನ ಸಂಚಿಕೆಯಿಂದ]

ವ್ಯಾಪಕ ನಿರುದ್ಯೋಗ

ಗುತ್ತೇದಾರಿ ಕಂಪನಿಗಳ ಆಗಮನದಿಂದ ಕಾರ್ಮಿಕವರ್ಗದ ವ್ಯಾಪಕ ನಿರುದ್ಯೋಗದ ಹಾಗೂ ವಲಸೆಯ ಪ್ರಶ್ನೆ ಪರಿಹಾರವಾಗಲಿಲ್ಲ. ಯಾಕೆಂದರೆ ಬಹಳ ಹಿಂದಿನಿಂದ ಸ್ಥಾಪಿತವಾಗಿದ್ದ, ಸ್ಥಳೀಯ ಮಾಲಕತ್ವದಲ್ಲಿದ್ದ ಕೈಗಾರಿಕೆಗಳು ಮಾಯವಾದವು-ಒಟ್ಟು ಉದ್ಯೋಗ ಪರಿಸ್ಥಿತಿ ಹಾಗೇ ಉಳಿಯಿತು. ಇದು ಒಟ್ಟು ಕಾರ್ಮಿಕ ಶಕ್ತಿಯ ಸರಾಸರಿ 7ರಿಂದ 13 ಶೇಕಡವಿತ್ತು. ಉತ್ತರ ಐರ್ಲೆಂಡಿನ ಮೂರು ಮೂಲಭೂತ ಕೈಗಾರಿಕೆಗಳಾದ ಕೃಷಿ, ಹಡಗು ನಿರ್ಮಾಣ ಹಾಗೂ ವಸ್ತ್ರೋದ್ಯಮ (ಒಟ್ಟು ಜನಸಂಖ್ಯೆ ಸುಮಾರು 15 ಲಕ್ಷ) ದಲ್ಲಿ 1 ಲಕ್ಷ 6 ಸಾವಿರ ಉದ್ಯೋಗಾವಕಾಶಗಳು ಕೈತಪ್ಪಿಹೋದವು.

ಐರ್ಲೆಂಡ್ ಗಣತಂತ್ರದಲ್ಲೂ ಸುಮಾರಾಗಿ ಇದೇ ಪ್ರವೃತ್ತಿಯಿತ್ತು. ಬ್ರಿಟಿಷ್ ಹಿತಾಸಕ್ತಿಗಳಿಗಿಂತ ಬೇರೆಯಾಗಿ ಸ್ವತಂತ್ರ ಆಧಾರದ ಮೇಲೆ ತನ್ನ ಗಣತಂತ್ರದ ಆರ್ಥಿಕತೆಯನ್ನು ಅಭಿವೃದ್ಧಿಗೊಳಿಸುವ ಧೋರಣೆಯನ್ನು ಅಲ್ಲಿನ ಫಿಯನ್ನಾ ಫೇಲ್ ಸರಕಾರ ಯಾವಾಗಲೋ ಬಿಟ್ಟುಕೊಟ್ಟಿತ್ತು. ಅದೂ ಉತ್ತರ ಐರ್ಲೆಂಡಿನಂತೆ ವಿದೇಶೀ ಗುತ್ತೇದಾರಿ ಕಂಪೆನಿಗಳನ್ನು ಆಕರ್ಷಿಸುವುದರಲ್ಲಿ ತೊಡಗಿತ್ತು. ಗುತ್ತೇದಾರಿ ಬಂಡವಾಳಶಾಹಿಗೆ ಐರ್ಲೆಂಡಿನ ವಿಭಜನೆ ಒಂದು ಅಸಂಗತ ಹಾಗೂ ಕಾಲವಿರೋಧಿಯಾದ ಘಟನೆಯಾಗಿ ಅನಿಸಲಾರಂಭಿಸಿತು. ಡಬ್ಲಿನ್ ಮತ್ತು ಲಂಡನ್ ಸರಕಾರಗಳ ಮತ್ತು ಬೆಲ್‌ಫಾಸ್ಟ್ ಆಡಳಿತದ ನಾಯಕರ ಭೇಟಿಗಳಿಂದ ಇದು ಸ್ಪಷ್ಟವಾಗಲಾರಂಭಿಸಿತು.

ಇದರ ಪರಿಣಾಮವಾಗಿ ಯೂನಿಯನಿಸ್ಟ್ ಕೂಟದ ಮೇಲೆ ಒತ್ತಡ ಹೆಚ್ಚಲಾರಂಭಿಸಿ ಅದಕ್ಕೆ ಬಲಪಂಥೀಯ ಪ್ರತಿಕ್ರಿಯೆ ಹೆಚ್ಚಲಾರಂಭಿಸಿತು. ಇದರ ಫಲವಾಗಿ 1966ರಲ್ಲಿ ಯೂನಿಯನ್‌ವಾದಿ "ಅಲ್ಸ್ಟರ್ ಸ್ವಯಂಸೇವಕ ಪಡೆ" (ಒಂದು ಅರೆಸೈನಿಕ ಸಂಘಟನೆ)ಯ ಪುನರ್ಜನ್ಮವಾಯಿತು.

ಇದರ ಜತೆಗೇ ಉತ್ತರ ಐರ್ಲೆಂಡಿನಲ್ಲಿ ಇನ್ನೊಂದು ಅಂಶ ಬೆಳೆಯುತ್ತಿತ್ತು-ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಟ ಬೆಳೆಯುತ್ತಿತ್ತು. ಇದು 1920ರ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪರಿಹಾರಕ್ಕೆ ತೀವ್ರ ತೊಂದರೆಯುಂಟು ಮಾಡಲಿತ್ತು.

ಉತ್ತರ ಐರ್ಲೆಂಡಿನ 'ಪುಟ್ಟರಾಜ್ಯ'ದ ಸ್ಥಾಪನೆಯ ಆರಂಭದಿಂದಲೂ ಯೂನಿಯನಿಸ್ಟ್ ಆಡಳಿತಗಾರರು ಬಲಾತ್ಕಾರದಿಂದ ಮತದಾನ ಕ್ಷೇತ್ರಗಳನ್ನು ತಮಗೆ ಅನುಕೂಲವಾಗುವಂತೆ ರೂಪಿಸುತ್ತಾ, ಮತದಾನದಲ್ಲಿ, ವಸತಿ, ಉದ್ಯೋಗ ಇತ್ಯಾದಿಯ ಹಂಚಿಕೆಯಲ್ಲಿ ಧಾರ್ಮಿಕ ಪಂಥದ ಆಧಾರದ ಮೇಲೆ ಬಹಿರಂಗವಾಗಿಯೇ ಭೇದಭಾವ ನಡೆಸುತ್ತಲೇ ಉತ್ತರ ಐರ್ಲೆಂಡಿನ ಮೇಲೆ ಹತೋಟಿಯಿಟ್ಟುಕೊಂಡಿದ್ದರು. ಈ ಆಯುಧಗಳನ್ನು ಸಂಪೂರ್ಣವಾಗಿ ಉಪಯೋಗಿಸಿಯೇ ಕಾರ್ಮಿಕವರ್ಗ, ಸಣ್ಣರೈತರು ಹಾಗೂ ಸಣ್ಣ ವ್ಯಾಪಾರಿಗಳ ನಡುವೆ ಪಂಥವಾದೀ ಒಡಕು ಯಾವಾಗಲೂ ಇರುವಂತೆ ನೋಡಿಕೊಂಡಿದ್ದರು.

ಪ್ರಜಾಪ್ರಭುತ್ವ ಹಕ್ಕುಗಳು

ಮೂಲಭೂತ ಪ್ರಜಾಪ್ರಭುತ್ವ ಹಾಗೂ ಮಾನವ ಹಕ್ಕುಗಳ ಅಭಾವ ಯೂನಿಯನಿಸ್ಟ್ ಪಕ್ಷ ಹಾಗೂ ಅದರ ಯಜಮಾನನಾದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ದುರ್ಬಲ ಅಂಶವೆಂದು 1962ರಲ್ಲಿ ಕಮ್ಯುನಿಸ್ಟ್ ಪಕ್ಷ ತನ್ನ ಕಾರ್ಯಕ್ರಮ ಘೋಷಣೆಯಲ್ಲಿ ತಿಳಿಸಿತ್ತು.

1968ರ ಹೊತ್ತಿಗೆ ಕಮ್ಯುನಿಸ್ಟರು, ಪ್ರಜಾಪ್ರಭುತ್ವವಾದಿಗಳು, ರಾಷ್ಟ್ರವಾದಿಗಳು, ಸಮಾಜವಾದಿಗಳು ಹಾಗೂ ಉದಾರವಾದಿಗಳು ಸೇರಿದ ಉತ್ತರ ಐರ್ಲೆಂಡ್ ನಾಗರಿಕ ಹಕ್ಕುಗಳು ಎಂಬ ಸಂಘಟನೆಯ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಒಂದು ಸಾಮೂಹಿಕ ಚಳುವಳಿ ಬೆಳೆಯಲಾರಂಭಿಸಿತು.

ಐರ್ಲೆಂಡಿನಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಸಾಧನವಾಗಿದ್ದ ಯೂನಿಯನಿಸ್ಟ್ ಪಕ್ಷ ಗುತ್ತೇದಾರಿ ಬಂಡವಾಳಶಾಹಿಯ ಒತ್ತಡ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಹೋರಾಟದ ನಡುವೆ ಅಡಕೊತ್ತಿನಲ್ಲಿ ಸಿಕ್ಕಿಹಾಕಿಕೊಂಡಂತಾಯಿತು. ಪರಿಣಾಮವಾಗಿ ಅದರ ಸರ್ವಪಕ್ಷಗಳ ಅದರ ಸದೃಢ ಕೂಟ ಹರಿದು ಹಂಚಿಹೋಯಿತು.

ಯೂನಿಯನಿಸ್ಟ್‌ಗಳು ಇದನ್ನು ತಡೆಹಿಡಿಯಲು ತಮ್ಮ ಅಧೀನದಲ್ಲಿದ್ದ ಪ್ರಭುತ್ವದ ಭಯೋತ್ಪಾದನೆಯ ಎಲ್ಲಾ ಸಾಧನಗಳನ್ನು ಉಪಯೋಗಿಸಿದರು ಮತ್ತು ಧಾರ್ಮಿಕ ಪಂಥವಾದದ ಬೆಂಕಿಗೆ ಗಾಳಿ ಊದಲಾರಂಭಿಸಿದರು. ಪ್ರಜಾಪ್ರಭುತ್ವ ಹಕ್ಕುಗಳ ಚಳುವಳಿ ರಿಪಬ್ಲಿಕನ್ ಚಳುವಳಿಯ ಸಶಸ್ತ್ರ ವಿಭಾಗ ಸಂಘಟಿಸಿದ ಸಂಚು ಎಂದು ಅವರು ಹೇಳಿಕೊಳ್ಳಲಾರಂಭಿಸಿದರು. ಐರಿಷ್ ರಿಪಬ್ಲಿಕನ್ ಆರ್ಮಿ (ಐ.ಆರ್.ಎ.-ಐರಿಷ್ ಗಣತಂತ್ರ ಸೇನೆ) ತನ್ನ ಬೇರು ಸಂಘಟಿತ ಕಾರ್ಮಿಕ ಚಳುವಳಿಯಲ್ಲಿದೆ ಹಾಗೂ ತನ್ನ ಯಶಸ್ಸು ಕಾರ್ಮಿಕವರ್ಗದ ಉದ್ಧಾರದ ಶಕ್ತಿಗಳು ಹಾಗೂ ರಾಷ್ಟ್ರೀಯ ವಿಮೋಚನೆಯ ಶಕ್ತಿಗಳು ಒಟ್ಟು ಸೇರಿ ತಕ್ಷಣದ ಗುರಿಯಾದ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಡುವಲ್ಲಿದೆ ಎಂಬುದನ್ನು ಐ.ಆರ್.ಎ. ನಿರ್ಲಕ್ಷಿಸಿತು.

ನಾಗರಿಕ ಹಕ್ಕುಗಳ ಚಳುವಳಿಯನ್ನು ನಿರ್ನಾಮಮಾಡುವ ಉದ್ದೇಶದಿಂದ ಆಗಸ್ಟ್ 1969ರಲ್ಲಿ ಡೆರ್ರಿ ಹಾಗೂ ಬೆಲ್‌ಫಾಸ್ಟ್ ನಗರಗಳಲ್ಲಿ ಕ್ಯಾಥೋಲಿಕ್ ಕಾರ್ಮಿಕವರ್ಗದ ವಿರುದ್ಧ ಒಂದು ಕಾರ್ಯಕ್ರಮವನ್ನು ಅವರು ಆರಂಭಿಸಿದರು. ಇದರಲ್ಲಿ ಅವರಿಗೆ ಯಶಸ್ಸು ದೊರೆಯಲಿಲ್ಲ. ಆದರೆ ಇದರಿಂದಾಗಿ ಗಣತಂತ್ರ ಚಳುವಳಿಯಲ್ಲಿ ಭೇದವುಂಟಾಗಿ ತಾತ್ಕಾಲಿಕ ಐ. ಆರ್. ಎ. ಜನ್ಮತಾಳಿತು-ಇದು ಮುಂದೆ 1970ರ ಸೈನಿಕ ಪ್ರಚಾರಕ್ಕೂ ಕಾರಣವಾಯಿತು.

ಪಾರ್ಲಿಮೆಂಟ್ ವಿಸರ್ಜಿಸಲ್ಪಟ್ಟಿತು

ರಾಜಕೀಯ ಪರಿಸ್ಥಿತಿಯಲ್ಲಿನ ಅಸ್ಥಿರತೆಯಿಂದಾಗಿ ಬ್ರಿಟಿಷರು ರಾಜಕೀಯವಾಗಿ ಹಾಗೂ ಸೈನಿಕವಾಗಿ ಮಧ್ಯ ಪ್ರವೇಶಿಸುವಂತಾಯಿತು.

"ಐರಿಷ್ ಪ್ರಶ್ನೆ" ಮತ್ತೊಮ್ಮೆ ಬ್ರಿಟಿಷ್ ರಾಜಕಾರಣದ ಪ್ರಮುಖ ವಿಷಯವಾಯಿತು. 1969ರಿಂದ 1972ರ ನಡುವೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಯೂನಿಯನಿಸ್ಟ್ ಸರಕಾರದ ಬೆನ್ನಿಗೆ ನಿಂತು ಈ ಪ್ರಶ್ನೆಗೆ ಸೈನಿಕ ಪರಿಹಾರ ಪಡೆಯಲು ಪ್ರಯತ್ನಿಸಿತು. 1971ರಲ್ಲಿ ವಿಚಾರಣೆಯಿಲ್ಲದೆ ಶ್ರಮ ಶಿಬಿರಗಳಿಗೆ ಅಟ್ಟುವ ಕಾನೂನನ್ನು ಮತ್ತೆ ಜಾರಿಗೊಳಿಸಲಾಯಿತು.

1972 ಫೆಬ್ರುವರಿ ಹೊತ್ತಿಗೆ ಯೂನಿಯನಿಸ್ಟ್ ಆಡಳಿತ ತನಗೊಂದು ಹೊರೆ, ಅಖಿಲ ಐರ್ಲೆಂಡ್ ಮಟ್ಟದಲ್ಲಿ ತನ್ನ ಸಾಮ್ರಾಜ್ಯಶಾಹೀ ಹಿತಾಸಕ್ತಿಗೆ ಒಂದು ತೊಡಕು ಹಾಗೂ ಯೂರೋಪಿಯನ್ ಆರ್ಥಿಕ ಸಮುದಾಯಕ್ಕೆ ಸಂಬಂಧಪಟ್ಟಂತೆ ತನ್ನ ಮಹತ್ವಾಕಾಂಕ್ಷೆಗೆ ಅಪಾಯಕಾರಿಯೆಂದು ಬ್ರಿಟನ್ನಿನ ಕನ್ಸರ್ವೇಟಿವ್ ಸರಕಾರಕ್ಕೆ ಸ್ಪಷ್ಟವಾಯಿತು. ಉತ್ತರ ಐರ್ಲೆಂಡಿನ ಪಾರ್ಲಿಮೆಂಟನ್ನು ವಿಸರ್ಜಿಸಿ ಲಂಡನ್ನಿನಿಂದ ನೇರ ಆಡಳಿತ ಆರಂಭವಾಯಿತು.

ಇದರ ನಂತರ ಬಂದ ಎಲ್ಲಾ ಬ್ರಿಟಿಷ್ ಸರಕಾರಗಳು-ಲೇಬರ್ ಪಕ್ಷದ್ದಾಗಲಿ, ಕನ್ಸರ್ವೇಟಿವ್ ಪಕ್ಷದ್ದಾಗಲೀ-ಯೂನಿಯನಿಸ್ಟ್‌ಗಳ ಸ್ಥಾನದಲ್ಲಿ ಕೇಟರಿಸ್ಟ್ ಕೂಟವನ್ನು ತರಲು ಪ್ರಯತ್ನಿಸಿದವು. ಅದರಲ್ಲಿ ಅವರಿಗೆ ಯಶಸ್ಸು ದೊರೆಯಲಿಲ್ಲ.

ಅದೇ ಸಮಯದಲ್ಲಿ ಉತ್ತರ ಐರ್ಲೆಂಡಿನಲ್ಲಿ ಮೂಲಭೂತ ಮಾನವ ಹಾಗೂಪ್ರಜಾಪ್ರಭುತ್ವ ಹಕ್ಕುಗಳಿರುವ ಪರಿಸ್ಥಿತಿಯನ್ನು ಸೃಷ್ಟಿಸಲು ಕೂಡಾ ಅವರು ಸತತವಾಗಿ ನಿರಾಕರಿಸಿದರು. ಬದಲಿಗೆ ತುರ್ತು ಕಟ್ಟುಪಾಡುಗಳು ಹಾಗೂ ಭಯೋತ್ಪಾದನಾ ನಿರೋಧಕ ಕಾನೂನು (Emergency Provisions and Prevention of Terrorism Act) ನ್ನು ಜಾರಿಗೊಳಿಸಿ ದಮನಕಾರೀ ಕಾನೂನುಗಳ ಕ್ಷೇತ್ರವನ್ನು ಮತ್ತಷ್ಟು ವ್ಯಾಪಕಗೊಳಿಸಿದರು; ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿದರು; ವಿಚಾರಣೆಯ ಸಮಯದಲ್ಲಿ ಚಿತ್ರಹಿಂಸೆ ನಡೆಸಿದರು; ಬ್ರಿಟಿಷ್ ಸೇನೆ ಹಾಗೂ ಪೋಲೀಸ್‌ಗೆ ಮನಬಂದಂತೆ ನಾಗರಿಕರನ್ನು ಕೊಲ್ಲಲು ಅನುಮತಿ ಕೊಟ್ಟರು; ಸಾವಿರಾರು ಜನ ಸೆರೆಮನೆಗಳಲ್ಲಿದ್ದಾರೆ-ಎರಡನೇ ಮಹಾಯುದ್ಧದ ಸಮಯದಲ್ಲಿ ಆಕ್ರಮಿತ ಯೂರೋಪಿನಲ್ಲಿದ್ದಂತಹ ವಾತಾವರಣ ನಮ್ಮ ನಗರಗಳಲ್ಲಿ ಹಾಗೂ ಪಟ್ಟಣಗಳಲ್ಲಿದ್ದು ಇಡಿಯ ಉತ್ತರ ಐರ್ಲೆಂಡನ್ನೇ ಒಂದು ಸೈನಿಕ ಶಿಬಿರವನ್ನಾಗಿ ಮಾಡಿದಂತೆ ಕಾಣುತ್ತದೆ.

ಮಿಥ್ಯೆಯನ್ನು ಕಾದುಕೊಳ್ಳುತ್ತಿದ್ದಾರೆ

ಇಷ್ಟೆಲ್ಲಾ ಇದ್ದರೂ ಅವರು ಜಗತ್ತಿಗೆ, ವಿಶೇಷವಾಗಿ ಬ್ರಿಟಿಷ್ ಜನತೆಗೆ ತಾವು ಉತ್ತರ ಐರ್ಲೆಂಡಿನಲ್ಲಿ ಶಾಂತಿ ಕಾಪಾಡಲು ಮಾತ್ರ ಇದ್ದೇವೆ. ಆ ಜವಾಬ್ದಾರಿಯಿಂದ ಆದಷ್ಟು ಬೇಗನೇ ಬಿಡುಗಡೆ ಸಿಗುವುದಕ್ಕಿಂತ ಹೆಚ್ಚಿನದ್ದೇನೂ ತಮಗೆ ಬೇಕಿಲ್ಲ ಎಂಬ ಮಿಥ್ಯೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕಿಂತ ಸತ್ಯದೂರವಾದ ಸಂಗತಿ ಬೇರೆ ಇರಲಿಕ್ಕಿಲ್ಲ. 1972 ಪ್ರಕಟಪಡಿಸಿದ 'ಹಸಿರು ಪತ್ರ'ದಲ್ಲಿ ಉತ್ತರ ಐರ್ಲೆಂಡ್ ರಾಜ್ಯಕ್ಕೆ ಈ ಹಿಂದೆ ಕಾರ್ಯದರ್ಶಿಯಾಗಿದ್ದ ವಿಲಿಯಂ ವೈಟ್‌ಲಾ ಅವರು ಉತ್ತರ ಐರ್ಲೆಂಡಿನ ಸಾಮರಿಕ ಮಹತ್ವ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಮಾತ್ರವಲ್ಲ, ಜಗತ್ತಿನ ಸಾಮ್ರಾಜ್ಯಶಾಹೀ ಶಕ್ತಿಗಳ ನಾಟೋ (NATO) ಕೂಟಕ್ಕೂ ಬಹಳ ಮುಖ್ಯವಾದದ್ದು ಎಂದು ಸ್ಪಷ್ಟಪಡಿಸಿದ್ದಾರೆ.

ಆದ್ದರಿಂದ ಬ್ರಿಟನ್ ತನ್ನ ಇಚ್ಛೆಯಿಂದಲೇ ಉತ್ತರ ಐರ್ಲೆಂಡಿನಿಂದ ಹಿಂದೆಗೆಯುವ ಪ್ರಶ್ನೆಯೇ ಇಲ್ಲ. ಇದು ಮತ್ತೆ ನಮ್ಮನ್ನು ಅದೇ ಪ್ರಶ್ನೆಯೆಡೆಗೆ ಒಯ್ಯುತ್ತದೆ-"ಹಾಗಾದರೆ ಪರಿಹಾರವೇನು?" ಎಲ್ಲಾ ಹಿಂಸೆಗೆ, ಎರಡು ಸಾವಿರಕ್ಕಿಂತಲೂ ಹೆಚ್ಚು ಜನರ ಕೊಲೆಗೆ (ಅವರು ಬಲಪಂಥೀಯರ ಒಂದು ಅರೆ ಸೈನಿಕ ಸಂಘಟನೆಯನ್ನು ಸೃಷ್ಟಿಸಿದ್ದಾರೆ) ಬ್ರಿಟಿಷ್ ಸಾಮ್ರಾಜ್ಯಶಾಹಿ ಧೋರಣೆಗಳೇ ಹೊಣೆ. ಸಾಮ್ರಾಜ್ಯಶಾಹಿಯ ಕ್ರಮಗಳು ತಾತ್ಕಾಲಿಕ ಐ.ಆರ್.ಎ.ಗೆ ಜನ್ಮವಿತ್ತಿವೆ.

ತನ್ನ ಎಲ್ಲಾ ಧೋರಣೆ ಹೇಳಿಕೆಗಳಲ್ಲಿ, ತನ್ನ ಎಲ್ಲಾ ಸಮ್ಮೇಳನಗಳ ದಸ್ತಾವೇಜುಗಳಲ್ಲಿ, ತನ್ನ ವಾರ್ತಾಪತ್ರಿಕೆಗಳಲ್ಲಿ ಹಾಗೂ ತನ್ನ ಕಾರ್ಯವಿಧಾನಗಳಲ್ಲಿ ಐರ್ಲೆಂಡಿನ ಕಮ್ಯುನಿಸ್ಟ್ ಪಕ್ಷ ತಾತ್ಕಾಲಿಕ ಐ.ಆರ್.ಎ.ನ ಸಶಸ್ತ್ರ ಪ್ರಚಾರವನ್ನು ವಿರೋಧಿಸುತ್ತದೆಂಬುದನ್ನು ಸ್ಪಷ್ಟವಾಗಿ ಹೇಳಿದೆ. ನಾವು ಹಾಗೆ ಹೇಳಿರುವುದು ಚಳುವಳಿಕಾರರನ್ನು ಸಮಾಧಾನಗೊಳಿಸುವ ದೃಷ್ಟಿಯಿಂದಲ್ಲ, ವರ್ಗದೃಷ್ಟಿಯಿಂದ. ಕಾರ್ಮಿಕವರ್ಗ ಹಾಗೂ ಶ್ರಮಜೀವಿ ಜನತೆ ರಾಜಕೀಯ ಧಾರ್ಮಿಕ ಪಂಥಗಳ ಮೇಲೆ ವಿಭಜಿತರಾಗಿರುವ ಸಂದರ್ಭದಲ್ಲಿ ತಾತ್ಕಾಲಿಕ ಐ.ಆರ್.ಎ. ನಡೆಸಿರುವ ಬಾಂಬ್ ಸ್ಫೋಟಗಳು, ಗುಂಡು ತೂರಾಟಗಳು ಆ ಒಡಕುಗಳನ್ನು ತೀವ್ರಗೊಳಿಸಿ, ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಅಗತ್ಯವಾಗಿ ನಡೆಯಬೇಕಾದ ಸಾಮೂಹಿಕ ಚಳುವಳಿಯ ಬೆಳವಣಿಗೆಯನ್ನು ಕುಂಠಿತಗೊಳಿಸಿ, ಸಾಮ್ರಾಜ್ಯಶಾಹಿಯ ಆರ್ಥಿಕ ಸೂರೆಯ ವಿರುದ್ಧ, ರಾಷ್ಟ್ರೀಯ ಸ್ವಾತಂತ್ರ್ಯ ಹಾಗೂ ಸಮಾಜವಾದೀ ಧೋರಣೆಗಳನ್ನು ಒಗ್ಗೂಡಿಸಿಕೊಂಡ ಹೋರಾಟಗಳನ್ನು ದುರ್ಬಲಗೊಳಿಸಿ ವಾಸ್ತವಿಕವಾಗಿ ಸಾಮ್ರಾಜ್ಯಶಾಹಿಯ ಬಲೆಗೇ ಬಿದ್ದಂತಾಗುತ್ತದೆ.

ಅದರ ಹೆಸರೇ ಸೂಚಿಸುವಂತೆ ಐರ್ಲೆಂಡ್ ಕಮ್ಯುನಿಸ್ಟ್ ಪಕ್ಷ ನಮ್ಮ ದೇಶದ ಭೌಗೋಳಿಕ ಏಕತೆ ಹಾಗೂ ಸಾರ್ವಭೌಮತೆಗಾಗಿ ಹೋರಾಡುತ್ತದೆ. ಇದನ್ನು ಸಾಧಿಸುವುದೆಂದರೆ ಸೈದ್ಧಾಂತಿಕ ಐಕ್ಯತೆಯನ್ನು ಸಾಧಿಸುವುದು, ಎಲ್ಲಕ್ಕಿಂತ ಮೊದಲು ಕಾರ್ಮಿಕ ವರ್ಗದ್ದು, ಅದರ ಸಹಯೋಗದೊಂದಿಗೆ ಸಣ್ಣ ರೈತರು, ಸಣ್ಣ ವ್ಯಾಪಾರಿಗಳು ಹಾಗೂ ಬುದ್ಧಿಜೀವಿಗಳ ನಡುವೆ ಐಕ್ಯತೆ ಸಾಧಿಸುವುದು ಎಂದೇ ಆಗುತ್ತದೆ.

ಈ ಹೋರಾಟದಲ್ಲಿ ಸದ್ಯ ಐರ್ಲೆಂಡ್ ವಿಭಜಿತವಾಗಿದ್ದರೂ ಕಾರ್ಮಿಕವರ್ಗ ಮತ್ತು ಅದರ ಮಿತ್ರರಿಗೆ ಸಾಕಷ್ಟು ಅನುಕೂಲಗಳಿವೆ:

1. ಇಡಿಯ ದ್ವೀಪಕ್ಕೆ ಒಂದು ಐಕ್ಯ ಕಮ್ಯುನಿಸ್ಟ್ ಪಕ್ಷವಿದೆ.

2. ಕಾರ್ಮಿಕ ಸಂಘಗಳ ಐರಿಷ್ ಕಾಂಗ್ರೆಸ್‌ನ ರೂಪದಲ್ಲಿ ಅಖಿಲ ಐರ್ಲೆಂಡ್ ಮಟ್ಟದ ಕಾರ್ಮಿಕ ಚಳುವಳಿಯಿದೆ.

ಉತ್ತರ ಐರ್ಲೆಂಡಿನಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಪಾರುಪತ್ಯಗಾರಿಕೆ ಸತತವಾಗಿ ಬಿಕ್ಕಟ್ಟನ್ನು ಎದುರಿಸಬೇಕಾಗಿರುವುದು 1920 ರಲ್ಲಿ ಐರಿಷ್ ಜನತೆಯ ಮೇಲೆ ಹೇರಿದ ಪರಿಹಾರ ವಿಫಲವಾಗಿರುವುದನ್ನು ತೋರಿಸುತ್ತದೆ. ಯಾವುದೇ ಹೊಸ

(7ನೇ ಪುಟ ನೋಡಿ)

ಸಿಖ್ ರಾಷ್ಟ್ರೀಯತ್ವ ಮತ್ತು ಖಲಿಸ್ಥಾನ

[ವರ್ಗಹೋರಾಟವನ್ನು ತಡೆಗಟ್ಟಿ, ಶೋಷಕವರ್ಗಗಳ ಹಿತಾಸಕ್ತಿಗಳನ್ನು ಕಾಪಾಡಲು ದುಡಿಯುವವರ್ಗವನ್ನು ಒಡೆಯಲು ಕೋಮುಭಾವನೆಗಳನ್ನು ಕೆರಳಿಸಲಾಗುತ್ತಿದೆ. ಕಾಂ. ಹರಿಕಿಶನ್‌ಸಿಂಗ್ ಸುರ್ಜಿತ್‌ರು "ವಿವಿಧ ವೇಷಗಳಲ್ಲಿ ಕೋಮುವಾದಿ ಶಕ್ತಿಗಳು" ಎಂಬ ಲೇಖನಮಾಲೆಯಲ್ಲಿ ಆರೆಸ್ಸೆಸ್, ಖಲೀಸ್ತಾನ್, ಜಮಾತ್-ಎ-ಇಸ್ಲಾಂ ಮೊದಲಾದ ಕೋಮುವಾದಿ ಸಂಸ್ಥೆಗಳ ನಿಜಬಣ್ಣವನ್ನು ಹೊರಗೆಡುವಿದ್ದಾರೆ. ಈ ಲೇಖನ ಅವರ ಲೇಖನಮಾಲೆಯಲ್ಲಿ ಎರಡನೇಯದು]

ಈ ಎರಡನೇ ಲೇಖನದಲ್ಲಿ ಹಿಂದೂರಾಷ್ಟ್ರ, ಹಿಂದೂಸ್ತಾನಗಳ ಪಡಿರೂಪವಾದ ಖಲೀಸ್ಥಾನ ಮತ್ತು ಸಿಖ್ ರಾಷ್ಟ್ರೀಯತೆ ಪ್ರಶ್ನೆಯನ್ನು ಎತ್ತಿಕೊಳ್ಳೋಣ. ಈ ವಿಷಯವನ್ನು ಚರ್ಚಿಸುವಾಗ ಸಿಖ್ ರೈತಾಪಿ ಜನಗಳಲ್ಲಿ ವಿಶೇಷ ಪ್ರಭಾವವುಳ್ಳ ಅಕಾಲಿ ಪಕ್ಷದ ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ಭಾರತದ ರಾಜರುಗಳ ವಿರುದ್ಧ ನಡೆಸಿದ ಹೋರಾಟದ ಚಾರಿತ್ರಿಕ ಹಿನ್ನಲೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಅಕಾಲಿ ಪಕ್ಷವು ತನ್ನ ಪೂರ್ವ ದಿನಗಳಲ್ಲಿ ದೇಶದ ಎಡ ಚಳುವಳಿಗೆ ತನ್ನ ಪೂರ್ಣ ಬೆಂಬಲ ನೀಡಿತ್ತು. ರಾಷ್ಟ್ರೀಯ ಚಳುವಳಿಯಲ್ಲಿ ಸಿಖ್ ರೈತಾಪಿ ಜನಗಳನ್ನು ಎಳೆತಂದಿದ್ದಲ್ಲದೆ 1927ರಲ್ಲಿ ವರ್ಕರ್ಸ್ ಮತ್ತು ಪೆಸೆಂಟ್ಸ್ ಪಕ್ಷವನ್ನು ಸ್ಥಾಪಿಸಿದಾಗ ತನ್ನ ಸಹಕಾರವನ್ನು ಆ ಪಕ್ಷಕ್ಕೆ ಕೊಟ್ಟಿತ್ತು. ಅಕಾಲಿ ಪಕ್ಷ ರಷಿಯನ್ ಕ್ರಾಂತಿ ಮತ್ತು ಅದರ ಸಾಧನೆಗಳನ್ನು ಕೊಂಡಾಡಿತ್ತು.

ಜಾತೀಯ ತಿರುವು

ಆದರೆ 1930ರಲ್ಲಿ ಹೊಸ ಸಂವಿಧಾನ ಮತ್ತು ಜಾತೀಯ ಆಧಾರದ ಮೇಲೆ ಪ್ರತ್ಯೇಕ ಮತಾಧಿಕಾರಿಗಳ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಪಕ್ಷದೊಳಗೆ ಜಾತೀಯ ಶಕ್ತಿಗಳು ಬೆಳೆದವು. ದೇಶದ ವಿಭಜನೆಯ ಸಮಯದಲ್ಲಿ ಸಿಖ್ ರಾಜರುಗಳು ಧರ್ಮದ ಹೆಸರಿನಲ್ಲಿ ತಮ್ಮ ರಾಜ್ಯಗಳನ್ನು ಉಳಿಸಿಕೊಳ್ಳಲು ಯತ್ನಿಸಿದರು. ಆಗಿನಿಂದಲೂ ಜಾತೀಯ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಪಕ್ಷದೊಳಗೆ ಘರ್ಷಣೆ ನಡೆದೇ ಇದೆ.

ದೇಶದಾದ್ಯಂತ ಹರಡುತ್ತಿದ್ದ ರಾಷ್ಟ್ರೀಯ ಚಳುವಳಿಯನ್ನು ಹತ್ತಿಕ್ಕಲು 'ಒಡೆದು ಆಳುವ ನೀತಿಯನ್ನು' ಬ್ರಿಟಿಷರು ಅನುಸರಿಸಿದರು. ಪಾಕೀಸ್ಥಾನದ ನಿರ್ಮಾಣ ಬಯಸುತ್ತಿದ್ದ ದ್ವಿ-ರಾಷ್ಟ್ರ ಸಿದ್ಧಾಂತಿಗಳಂತೆ ಸಿಖ್ ರಾಷ್ಟ್ರೀಯತೆ ಆಧಾರದ ಮೇಲೆ ಪ್ರತ್ಯೇಕ ಸಿಖ್ ರಾಷ್ಟ್ರಕ್ಕಾಗಿ ಹೋರಾಡುವಂತೆ ಸಿಖ್‌ರನ್ನು ಪ್ರಚೋದಿಸುತ್ತಿದ್ದರು. ಆದರೆ ಪಕ್ಷದೊಳಗಿನ ಪ್ರಗತಿಪರ ಶಕ್ತಿಗಳಿಂದಾಗಿ ಈ ಬೇಡಿಕೆಯನ್ನು ಕೈ ಬಿಡಲಾಯಿತು.

ಈ ಸಿದ್ಧಾಂತದ ತರ್ಕ ಹೀಗಿದೆ. ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ, ಭಾಷಾ ಹಾಗೂ ಸಾಂಸ್ಕೃತಿಕ ಹೊಂದಾಣಿಕೆಯುಳ್ಳ ಜನಾಂಗವನ್ನು ಆಧರಿಸದೆ, ಧರ್ಮವನ್ನು ಆಧರಿಸಿದ ರಾಷ್ಟ್ರಗಳ ನಿರ್ಮಾಣ. ಅಕಾಲಿಗಳು ಆ ಸಮಯದಲ್ಲಿ ಈ ಸಮಸ್ಯೆಯನ್ನು ಆಳವಾಗಿ ಚಿಂತಿಸಲಿಲ್ಲ. ಮುಸ್ಲಿಂರನ್ನು ಅವರ ಧರ್ಮದ ಆಧಾರದ ಮೇಲೆ ರಾಷ್ಟ್ರವೆಂದು ಪರಿಗಣಿಸುವುದಾದರೆ ಅದೇ ನೀತಿಯನ್ನು ತಮಗೂ ಏಕೆ ಅನ್ವಯಿಸಬಾರದೆಂಬ ಬೇಡಿಕೆಯನ್ನು ಮುಂದಿಟ್ಟರು.

ಪಾಕೀಸ್ಥಾನದ ಅನುಭವ

ಆದರೆ ಈ ಸಿದ್ಧಾಂತದ ದೋಷ ಬಯಲಾಗಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಇಸ್ಲಾಂ ಧರ್ಮ ಆಧರಿಸಿದ್ದ ಪಾಕೀಸ್ಥಾನ 25 ವರ್ಷಗಳಲ್ಲಿ ಇಬ್ಭಾಗವಾಗಿದೆ. ಸದ್ಯದ ಪಾಕೀಸ್ಥಾನದಲ್ಲೂ ರಾಷ್ಟ್ರೀಯತೆಯ ಪ್ರಶ್ನೆ ತೀವ್ರಸ್ವರೂಪ ತಳೆದಿದೆ. ಇಸ್ಲಾಂ ರಾಜ್ಯದ ಘೋಷಣೆಯ ಮುಖವಾಡದ ಜಿಯಾ-ಉಲ್-ಹಕ್‌ನ ಮಿಲಿಟರಿ ಆಡಳಿತದಲ್ಲೂ ವಿವಿಧ ರಾಷ್ಟ್ರೀಯ ಸಮುದಾಯಗಳು– ಸಿಂಧೀ, ಬಲೂಚಿ, ಪಠಾನ್ – ತಮ್ಮ ಸ್ವತಂತ್ರ ಅಸ್ತಿತ್ವಕ್ಕೆ ಹೋರಾಡುತ್ತಿವೆ. ಯಾವುದೇ ಧಾರ್ಮಿಕ ಘೋಷಣೆ ಎತ್ತಿದರೂ ಮೂಲಭೂತವಾಗಿ ವಿವಿಧ ರಾಷ್ಟ್ರೀಯ ಸಮುದಾಯಗಳಿಗೆ ಸಾಮಾಜಿಕ-ರಾಜಕೀಯ ಪ್ರಗತಿಗೆ ಸಮಾನ ಅವಕಾಶ ಕೊಡದಿದ್ದಲ್ಲಿ ಪಾಕೀಸ್ಥಾನವು ಸ್ಥಿರತೆಯನ್ನು ಪಡೆಯಲು ಸಾಧ್ಯವಿಲ್ಲ. ಇದೇ ರೀತಿ ಇಸ್ಲಾಮಿಕ್ ಸಮ್ಮೇಳನವಾಗಲಿ, ಧಾರ್ಮಿಕ ಮೂಲಭೂತತ್ವವಾಗಲಿ (Islamic Fundamentalism) ಮುಸ್ಲಿಂ ದೇಶಗಳನ್ನು ಒಂದುಗೂಡಿಸಲಾಗಿಲ್ಲ. ವಾಸ್ತವದಲ್ಲಿ ಇರಾನ್–ಇರಾಕ್ ದೇಶಗಳು ಪರಸ್ಪರ ಯುದ್ಧದಲ್ಲಿ ತೊಡಗಿವೆ.

ರಾಜ್ಯಗಳ ಮರುವಿಂಗಡನೆಯ ಸಮಯದಲ್ಲಿ ಕಾಂಗ್ರೆಸ್ಸಿನೊಂದಿಗೆ ಸಂಮಿಶ್ರ ಸರ್ಕಾರದಲ್ಲಿ ಭಾಗವಹಿಸಿದ್ದು ಮತ್ತು ಪಾಕೀಸ್ಥಾನದ ಅನುಭವದಿಂದ ಪಾಠ ಕಲಿಯಿತು. ಈಗ ಪುನಃ ಅಕಾಲಿ ಪಕ್ಷ ಸಿಖ್ ರಾಷ್ಟ್ರ ಮತ್ತು ಸಿಖ್ ರಾಜ್ಯದ ಘೋಷಣೆಯನ್ನು ಎತ್ತಿದೆ. ಆದರೆ ತನ್ನ ಈ ಬೇಡಿಕೆಗೆ ಜನರ ಬೆಂಬಲ ಗಳಿಸುವುದು ಸಾಧ್ಯವಿಲ್ಲ.

ಆದರೆ ಈ ನಡುವೆ ಪಂಜಾಬಿ ಮಾತನಾಡುವವರ ಐಕ್ಯತೆಗೆ ಸಾಕಷ್ಟು ಧಕ್ಕೆ ಮಾಡಲಾಗಿದೆ. ಜನಸಂಘ ನಾಯಕತ್ವದ ಹಿಂದೂ ಜಾತೀಯವಾದಿಗಳು ಭಾಷಾವಾರು ಪ್ರಾಂತಗಳನ್ನು ವಿರೋಧಿಸುವುದಕ್ಕಾಗಿ ಪಂಜಾಬಿಯನ್ನು ತನ್ನ ಮಾತೃಭಾಷೆಯಲ್ಲವೆಂದು ಹೇಳುತ್ತಿದ್ದಾರೆ. 1951 ಮತ್ತು 1961ರ ಜನಗಣತಿಯಲ್ಲಿ ಈ ಜಾತೀಯವಾದಿಗಳು ತಮ್ಮ ಮಾತೃಭಾಷೆಯನ್ನು ಹಿಂದಿಯೆಂದು ಬರೆಸಿದ್ದಾರೆ. ಇದರ ಆಧಾರದ ಮೇಲೆ ಅನೇಕ ಪಂಜಾಬಿ ಪ್ರದೇಶಗಳನ್ನು ಪಂಜಾಬ್ ರಾಜ್ಯದ ಹೊರಗಿಡಲಾಗಿದೆ. ಇಂದಿಗೂ ಚಂಡೀಗಡ ಮತ್ತು ಪಂಜಾಬಿ ಪ್ರದೇಶದ ಪ್ರಶ್ನೆ ಇತ್ಯರ್ಥವಾಗದೆ ಉಳಿದಿವೆ.

ಅಕಾಲಿ ಪಕ್ಷ ಚರಿತ್ರೆಯಿಂದ ಪಾಠ ಕಲಿತಿಲ್ಲ. ಸಿಖ್‌ಮತೀಯ ಅಲ್ಪಸಂಖ್ಯಾತರ ವಿರುದ್ಧದ ಕೆಲವು ತಾರತಮ್ಯಗಳಿಂದ ಉಂಟಾಗಿರುವ ಅಸಮಾಧಾನವನ್ನು ಉಪಯೋಗಿಸಿಕೊಂಡು ಪ್ರತ್ಯೇಕ ರಾಷ್ಟ್ರದ ಘೋಷಣೆಯನ್ನು ಮುಂದಿಟ್ಟಿದೆ.

ವಿಚ್ಛಿದ್ರಕಾರಿ ಘೋಷಣೆಗಳು

ಆನಂದಪುರ ಗೊತ್ತುವಳಿ

ಈ ಎಲ್ಲಾ ಹಿನ್ನಲೆಯೊಂದಿಗೆ ಇಂದು ಹೆಚ್ಚು ಚರ್ಚೆಗೆ ಒಳಗಾದ ಆನಂದಪುರ 1973ರ ಠರಾವನ್ನು ತನ್ನ ಆನಂದಪುರ ಸಾಹಿಬ್ ಸಮಾವೇಶದಲ್ಲಿ ಅಳವಡಿಸಲಾಯಿತು. ಈ ಗೊತ್ತುವಳಿಯನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. ಸಿಖ್ ಉಗ್ರಗಾಮಿಗಳಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳಲು ಇಚ್ಛಿಸುವವರು ಇದನ್ನು ರಾಜ್ಯಗಳಿಗೆ ಹೆಚ್ಚಿನ ಅಧಿಕಾರದ ಬೇಡಿಕೆ ಎಂದು ವಿವರಿಸಿದರೆ ಉಳಿದವರು ಸಿಖ್ ರಾಷ್ಟ್ರೀಯತೆಯನ್ನು ಇದು ಆಧರಿಸಿದೆಯೆಂದು ಹೇಳುತ್ತಿದ್ದಾರೆ. ಈ ಗೊತ್ತುವಳಿಯಲ್ಲಿ ಎರಡು ಅಂಶಗಳನ್ನು ಗಮನಿಸಬಹುದು. ಇದರಲ್ಲಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೇಳಿದ್ದರು. ಗೊತ್ತುವಳಿಯ ಪ್ರಮುಖ ಭಾಗವು ಅಪಾಯಕಾರಿಯಾದ ಸಿಖ್ ರಾಷ್ಟ್ರೀಯತೆ ಸಿದ್ಧಾಂತವನ್ನು ಆಧರಿಸಿದೆ. ಸಿಖ್‌ರನ್ನು ಸಂಬಂಧಿಸಿದಂತೆ ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಗೊಳಿಸಲಾಗುವುದಿಲ್ಲ ಎಂಬುದನ್ನು ಇದು ವ್ಯಕ್ತಗೊಳಿಸುತ್ತದೆ.

ಈ ಘೋಷಣೆಯ ಬಗ್ಗೆ ವಿಮುಚಿತರಾಗಿರುವ ಅಕಾಲಿ ನಾಯಕತ್ವದ ಒಂದು ಗುಂಪು ಅಂದು ಆನಂದಪುರ ಗೊತ್ತುವಳಿಯನ್ನು ವಿರೋಧಿಸುವ ಎದೆಗಾರಿಕೆ ತೋರಲಿಲ್ಲ. ಮುಂದಿನ ಅಧಿವೇಶನಗಳಲ್ಲೂ ತೀವ್ರ ಚರ್ಚೆಗೆ ಒಳಪಡಿಸದೆ ಈ ಗೊತ್ತುವಳಿಯನ್ನು ಒಪ್ಪಿಕೊಳ್ಳಲಾಯಿತು. ಅಕಾಲಿ ಪಕ್ಷವು ತುರ್ತುಪರಿಸ್ಥಿತಿ ವಿರುದ್ಧ ಹೋರಾಟದಲ್ಲಿ ತೊಡಗಿದ್ದು ಇಲ್ಲಿಯವರೆಗೆ ಈ ಗೊತ್ತುವಳಿ ಧೂಳು ತಿನ್ನುತ್ತಿತ್ತು. ನಂತರ ಅಕಾಲಿ–ಜನತಾ ಸಂಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂತು.

ಅಧಿಕಾರ-ರಾಜಕೀಯಂದ ತುರ್ತು ಈ ಗೊತ್ತುವಳಿಗೆ ನಿಲುಗಡೆ ತಂದಿತ್ತು. 1980ರಲ್ಲಿ ಇಂದಿರಾ ಅಧಿಕಾರಕ್ಕೆ ಬಂದ ನಂತರ ಮತ್ತು ಪಕ್ಷದೊಳಗೆ ತೀವ್ರ ಬಿಕ್ಕಟ್ಟಿನಿಂದಾಗಿ ಪಕ್ಷದ ವಿಭಜನೆಯ ನಂತರ ಎರಡೂ ಬಣಗಳೂ ಪೈಪೋಟಿಯಿಂದ ಈ ಪ್ರಶ್ನೆಯನ್ನು ಎತ್ತಿಕೊಂಡವು. ಕೇಂದ್ರದ ಅಧಿಕಾರಶಾಹಿಯ ವಿರುದ್ಧ ಬೆಳೆಯುತ್ತಿರುವ ದುಡಿಯುವ ವರ್ಗದ ಪಕ್ಷ ಹೋರಾಟದ ಸಂದರ್ಭದಲ್ಲಿ ಈ ಬಣಗಳು ಜಾತೀಯ ಭಾವನೆಯನ್ನು ಪ್ರಚೋದಿಸುತ್ತಿವೆ.

ಶೈಕ್ಷಣಿಕ ಸಮಾವೇಶ

ಪ್ರತಿಗಾಮಿ ಭೂಮಾಲೀಕರ ನಾಯಕತ್ವದ ಖಲಸ-ದಿವಾನ್‌ನ ಅಂಗಸಂಸ್ಥೆಯಾದ ಸಿಖ್ ಶೈಕ್ಷಣಿಕ ಸಮಾವೇಶದ ಅಧ್ಯಕ್ಷತೆಯನ್ನು ವಹಿಸುವಂತೆ ಅಮೇರಿಕಾದ ಪೌರತ್ವ ಹೊಂದಿರುವ ಗಂಗಾಸಿಂಗ್ ದಿಲ್ಲಾನ್ ರವರನ್ನು ಕೇಳಿದ್ದು ಒಂದು ಆಕಸ್ಮಿಕವಲ್ಲ. ಈ ದಿಲ್ಲಾನ್ ಪಾಕೀಸ್ಥಾನದಲ್ಲಿರುವ ಸಿಖ್ ಧರ್ಮಮಂದಿರಗಳನ್ನು ತನ್ನ ನಾನಕಾನ ಸಾಹಿಬ್ ಫೌಂಡೇಷನ್‌ಗೆ ಹಿಂತಿರುಗಿಸುವಂತೆ ಒತ್ತಾಯಿಸಿ ಈಗಾಗಲೇ ಹಲವಾರು ಬಾರಿ ಜಿಯಾ-ಉಲ್-ಹಕ್‌ನನ್ನು ಭೇಟಿಯಾಗಿದ್ದಾನೆ. ತನ್ನ ಅಧ್ಯಕ್ಷೀಯ ಭಾಷಣದಲ್ಲಿ ಸಿಖ್ ರಾಜ್ಯಕ್ಕಾಗಿ ಹೋರಾಡಲು ಸಿಖ್ ಸಮುದಾಯವನ್ನು ಆಗ್ರಹಪಡಿಸಿದ್ದಾನೆ. ಈ ಸಮಯದಲ್ಲೇ ಖಲೀಸ್ಥಾನದ ಪರವಾಗಿ ಘೋಷಣೆಗಳನ್ನು ಕೂಗಲಾಯಿತು.

ಗಂಗಾಸಿಂಗ್ ದಿಲ್ಲಾನ್ ತನ್ನ ಭಾರತದ ಭೇಟಿಯ ವೇಳೆ ಇಲ್ಲಿನ ಅನೇಕ ಅಕಾಲಿ ನಾಯಕರನ್ನು ಭೇಟಿಯಾಗಿದ್ದು ಕೆಲವೇ ದಿನಗಳಲ್ಲಿ ಈ ಪ್ರಶ್ನೆ ತೀವ್ರಸ್ವರೂಪ ಪಡೆಯಿತು. ಗುರುದ್ವಾರ ಪ್ರಬಂಧಕ ಸಮಿತಿಯ ಅಧ್ಯಕ್ಷ ಸರದಾರ್ ಗುರುಚರಣಸಿಂಗ್ ತೊಹ್ರ ಮತ್ತು ಅಕಾಲಿ ತಖ್ತಿನ ಮುಖ್ಯ ಅರ್ಚಕರು ಈ ಘೋಷಣೆಗಳನ್ನು ಅನುಮೋದಿಸಿದ್ದಾರೆ. ಅಕಾಲಿ ಪಕ್ಷದ ತಲಿವಂಡಿ ಮತ್ತು ಲಾಂಗೋವಾಲ ಬಣಗಳು ಇದಕ್ಕಾಗಿ ಹೋರಾಡಲು ನಿರ್ಧರಿಸಿವೆ.

ತಲಿವಂಡಿ ಗುಂಪಿನ ಪ್ರಧಾನ ಕಾರ್ಯದರ್ಶಿ 'ಸಿಖ್‌ರು ಒಂದು ರಾಷ್ಟ್ರವಲ್ಲ ಎನ್ನುವವರ ನಾಲಿಗೆ ಕತ್ತರಿಸುತ್ತೇವೆ' ಎನ್ನುವ ಹೇಳಿಕೆ ನೀಡಿದ್ದಾರೆ.

ಸುಮ್ಮನಿರಲಾಗುವುದಿಲ್ಲ

ಪಕ್ಷದ ಎರಡೂ ಬಣಗಳು ಸಿಖ್ ರಾಷ್ಟ್ರೀಯತೆಯ ಬಗ್ಗೆ ಪ್ರತಿಪಾದಿಸುತ್ತಿರುವುದರಿಂದ ನಾವು ನಿರಾತಂಕವಾಗಿರಲಾಗುವುದಿಲ್ಲ. ಇಂತಹ ಪ್ರವೃತ್ತಿಗಳನ್ನು ಪ್ರಾರಂಭದಲ್ಲೇ ತೊಡೆಯದಿದ್ದರೆ ಮುಂದೆ ಜನರ ಮನಸ್ಸನ್ನು ಹೊಕ್ಕ ಮೇಲೆ ಇದರ ವಿರುದ್ಧ ಹೋರಾಟ ಕಷ್ಟವಾಗುತ್ತದೆ.

ರಾಷ್ಟ್ರೀಯ ಪ್ರಶ್ನೆಯನ್ನು ಆಮೇಲೆ ಎತ್ತಿಕೊಳ್ಳೋಣ. ಇಲ್ಲಿ ಇಷ್ಟು ಮಾತ್ರ ಹೇಳಬಹುದು. ಒಂದೇ ಭಾಷೆ, ಜನಾಂಗೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಪಂಜಾಬಿ ರಾಷ್ಟ್ರೀಯ ಸಮುದಾಯಕ್ಕೆ 1947ರ ವಿಭಜನೆ ತೀವ್ರ ಹೊಡೆತಕೊಟ್ಟಿದೆ. ಆದರೆ ವಿವಿಧ ಜನಸಮುದಾಯ ಸಿಖ್ ಭಾಷೆ, ಸಂಸ್ಕೃತಿ, ಆರ್ಥಿಕ ಸ್ಥಿತಿಗೆ ಕೊಟ್ಟಿರುವ ಕಾಣಿಕೆಯನ್ನು ಯಾರಾದರೂ ನಿರಾಕರಿಸಲುಸಾಧ್ಯವೆ? ಇಂದಿಗೂ ಪ್ರಸಿದ್ಧ ಕವಿ ವಾರಿಸ್ ಷಾ (Waris Shah)ನನ್ನು ಪಂಜಾಬಿನ ಮನೆಮನೆಯಲ್ಲೂ ನೆನೆಯುತ್ತಾರೆ.

ತಪ್ಪು ಕಲ್ಪನೆ

ಸಿಖ್ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಲಾಗದೆಂಬ ತಪ್ಪು ಕಲ್ಪನೆಯ ಮೇಲೆ ಸಿಖ್ ರಾಷ್ಟ್ರೀಯತೆ ಆಧರಿಸಿದೆ. ಒಂದೇ ಧರ್ಮಕ್ಕೆ ಸೇರಿದ್ದರೂ, ವರ್ಗ ಆಧಾರಿತ ಸಮಾಜದಲ್ಲಿ ವಿವಿಧ ವರ್ಗಗಳ- ಶೋಷಕರು ಶೋಷಿತರು-ರಾಜಕೀಯವು ಒಂದೇ ಆಗಿರಲು ಹೇಗೆ ಸಾಧ್ಯ? ಸಿಖ್ ಬಂಡವಾಳಗಾರರು ಸಿಖ್ ಕಾರ್ಮಿಕರನ್ನು ಶೋಷಿಸುವಲ್ಲಿ ಇತರ ಧರ್ಮಗಳ ಬಂಡವಾಳಗಾರರೊಂದಿಗೆ ಕೈ ಜೋಡಿಸುತ್ತಾರೆ. ಸಿಖ್ ಬಂಡವಾಳಗಾರರ ರಾಜಕೀಯವು ಶೋಷಣೆಯ ರಾಜಕೀಯವಲ್ಲದೆ ಬೇರೆ ಅಲ್ಲ. ಅಕಾಲಿ ನಾಯಕತ್ವವು ಯಾವ ವರ್ಗದ ರಾಜಕೀಯವನ್ನು ಅನುಮೋದಿಸುತ್ತದೆ.

7ನೇ ಪುಟ ನೋಡಿ)

ಚೀನೀ ವಿದೇಶ ಮಂತ್ರಿಯ ಮುಂಬರುವ ಭೇಟಿಯ ಕುರಿತು

ಜೂನ್ 1981ರ ಕೊನೆಯ ವಾರದಲ್ಲಿ ಭಾರತಕ್ಕೆ ಬರಲಿರುವ ಚೀನಾದ ವಿದೇಶಾಂಗ ಮಂತ್ರಿ ಹುವಾಂಗ್ ಹುವಾರ ಭೇಟಿ ಭಾರತ, ಚೀನಾ ಹಾಗೂ ಸಂಪೂರ್ಣ ಏಷ್ಯಾ ಕ್ಷೇತ್ರದ ಭವಿಷ್ಯಕ್ಕೆ ಬಹಳ ರಾಜಕೀಯ ಮಹತ್ವವುಳ್ಳದ್ದು. ನಮ್ಮ ಸಮಕಾಲೀನವಾದ ಸಂಪೂರ್ಣ ಜಗತ್ತಿಗೇ ಇದು ಮಹತ್ವಪೂರ್ಣವಾದದ್ದು.

ಇವೆರಡೂ ದೇಶಗಳ ಜನಸಂಖ್ಯೆ ಒಟ್ಟು ಸೇರಿಸಿದರೆ 170ಕೋಟಿ, ಅಂದರೆ ಜಗತ್ತಿನ ಜನಸಂಖ್ಯೆಯ 40 ಶೇಕಡಾದಷ್ಟಾಗುತ್ತದೆ ಎಂಬ ಸರಳ ಸಂಗತಿಯೇ ಜಾಗತಿಕ ಬೆಳವಣಿಗೆಗಳ ಮೇಲೆ ತನ್ನದೇ ಆದ ವಿಶಿಷ್ಟ ಪ್ರಭಾವ ಬೀರುತ್ತದೆ. ಈ ಎರಡು ಮಹದಾಕಾರದ ಜನತೆ ಹಾಗೂ ಅವರ ಸರ್ಕಾರಗಳ ನಡುವಿನ ಸಂಬಂಧಗಳಲ್ಲಿನ ಸುಧಾರಣೆ ನಮ್ಮ ಕಾಲದ ಜ್ವಲಂತ ಪ್ರಶ್ನೆಗಳಾದ ಯುದ್ಧ ಮತ್ತು ಶಾಂತಿ, ಹೊಸ ಆರ್ಥಿಕ ವ್ಯವಸ್ಥೆ ಮತ್ತು "ಉತ್ತರ" ಮತ್ತು "ದಕ್ಷಿಣ" ಎಂದು ಕರೆಯಲ್ಪಡುವ ದೇಶಗಳ ನಡುವೆ ನಡೆಯುತ್ತಿರುವ ಸಂವಾದ ಹಾಗೂ ಸಂಪೂರ್ಣ ಕ್ಷೇತ್ರದಲ್ಲಿನ ಬಿಗಿತನವನ್ನು ಸಡಿಲಗೊಳಿಸುವುದರ ಮೇಲೆ ಇತ್ಯಾತ್ಮಕವಾದ ಹಾಗೂ ಹಿತಕರ ಪ್ರಭಾವ ಬೀರುವುದು ಖಂಡಿತ.

ಎರಡು ದಶಕಗಳ ಚರಿತ್ರೆ

ಈ ಹಿಂದೆ ಒಬ್ಬ ಚೀನೀ ವಿದೇಶಾಂಗ ಮಂತ್ರಿಯ ಭೇಟಿಯು ಇಪ್ಪತ್ತು ವರ್ಷಗಳಿಗೂ ಮೀರಿದ ಅವಧಿಯ ನಂತರ ಹುವಾಂಗ್ ಹುವಾರ ಈ ಭಾರತ ಭೇಟಿ ನಡೆಯಲಿದೆ. ಎರಡು ದಶಕಗಳ ಹಿಂದೆ, ಚೀನಾದ ಆಗಿನ ವಿದೇಶಾಂಗ ಮಂತ್ರಿ ಚೆನ್‌ಯಿ, ಆಗಿನ ಚೀನೀ ಪ್ರಧಾನ ಮಂತ್ರಿ ಚೌ ಎನ್‌ಲೈ ಜತೆಗೆ ಎರಡು ದೇಶಗಳ ನಡುವಿನ ಗಡಿವಿವಾದ ಹಾಗೂ ಇತರ ಸಂಬಂಧಿತ ವಿವಾದಗಳನ್ನು ಬಗೆಹರಿಸುವ ದೃಷ್ಟಿಯಿಂದ ಈ ದೇಶಕ್ಕೆ ಭೇಟಿಯಿತ್ತಿದ್ದರು. ವಿವಾದ ಬಗೆಹರಿಯಲಿಲ್ಲ. ಅವರು ಮುಂದೆ 1962ರಲ್ಲಿ ಭಾರತ ಮತ್ತು ಚೀನಾದ ನಡುವಿನ ಗಡಿಯುದ್ಧದ ದುರಂತಕಾರೀ ಬೆಳವಣಿಗೆಗೆ ಎಡೆ ಮಾಡಿಕೊಟ್ಟಿತು. ಸಮಾಜವಾದೀ ಚೀನಾ ಹಾಗೂ ಹೊಸದಾಗಿ ಸ್ವತಂತ್ರವಾದ ಭಾರತದ ನಡುವಿನ ಈ ಗಡಿಯುದ್ಧ ಮತ್ತು ತದನಂತರದ ಎರಡು ದಶಕಗಳು ಈ ಎರಡು ದೊಡ್ಡ ದೇಶಗಳ ನಡುವಿನ ಶತಮಾನಗಳ ಕಾಲದ ಆದರ್ಶಪ್ರಾಯ ನೆರೆಕರೆಯ ಸಂಬಂಧಗಳಲ್ಲಿ ಒಂದು ಅಳಿಸಲಾರದ ಕಳಂಕವಾಗಿ ಉಳಿದಿದೆ.

ನಮ್ಮಲ್ಲಿ ಕೆಲವರಿಗೆ ಚೀನಾದ ಪ್ರಧಾನಮಂತ್ರಿ ಹಾಗೂ ವಿದೇಶಾಂಗ ಮಂತ್ರಿ ಒಂದು ಇಡೀ ವಾರ ರಾಜಧಾನಿಯಲ್ಲಿದ್ದು ಕೇಂದ್ರ ನಾಯಕರೊಂದಿಗೆ ಭಾರತ ಸರಕಾರದ ನಾಯಕರೊಂದಿಗೆ ಮಾತುಕತೆ, ಚರ್ಚೆ ಇತ್ಯಾದಿ ಬಿಡುವಿಲ್ಲದ ಚಟುವಟಿಕೆಗಳಲ್ಲಿ ತೊಡಗಿದ್ದ ಆ ದಿನಗಳ ನೆನಪು ಇನ್ನೂ ಹಸಿರಾಗಿವೆ. ಆದರೆ ವಾರವಿಡೀ ನಡೆದ ಮಾತುಕತೆಗಳು ಮುಂದುವರಿಯಲಾರದೆ ಸ್ತಂಭನಗೊಂಡು ಚೌ ಎನ್‌ಲೈ ಹಾಗೂ ಚೆನ್ ಯಿ ಯಾವುದೇ ಫಲಶ್ರುತಿಯಿಲ್ಲದೆ ಭಾರತ ಬಿಡಬೇಕಾಯಿತು. ಚೀನೀ ಗಣ್ಯರನ್ನು ಬೀಳ್ಕೊಡಲು ಹೋದ ಜವಾಹರ್‌ಲಾಲ್ ನೆಹರೂರವರು ವಿಮಾನ ನಿಲ್ದಾಣದಲ್ಲಿ ಕೊಟ್ಟ ಹೇಳಿಕೆಯನ್ನು, ಕಾಠ್‌ಮಂಡು ತಲುಪಿದ ಮೇಲೆ ಚೌ ಎನ್‌ಲೈ ಕೊಟ್ಟ ಪ್ರತಿ ಹೇಳಿಕೆಯನ್ನು ನಾವು ನೋವಿನಿಂದ ಜ್ಞಾಪಿಸಿಕೊಳ್ಳುತ್ತಿದ್ದೇವೆ. ಟಿಬೇಟಿನಲ್ಲಿ ಲಾಮಾಗಳ ದಂಗೆ ಚೀನೀ ಸರಕಾರ ಅದನ್ನು ಅಡಗಿಸಿದ್ದು, ಆಗಿನ ಭಾರತ ಸರಕಾರದಿಂದ ಆ ಕುರಿತು ಪ್ರತಿಕ್ರಿಯೆ, ಬೇರೆ ರೀತಿಯಲ್ಲಿ ಪ್ರಶಾಂತವಾಗಿದ್ದ ಭಾರತ-ಚೀನಾ ಗಡಿಯಲ್ಲಿ ಹಲವು ಗಡಿ ತಿಕ್ಕಾಟಗಳು, ಭಾರತ ತನ್ನದೆಂದಿದ್ದ ಗಡಿಯಾಚೆಗೆ ಚೀನೀಯರನ್ನು ಎಸೆದುಬಿಡಬೇಕೆಂಬ ನೆಹರೂರವರ ಬಹಿರಂಗ ಕರೆ, ಈಶಾನ್ಯ ಗಡಿಯಲ್ಲಿ ಚೀನೀಯರ ಭಾರೀ ಪ್ರಮಾಣದ ಸಶಸ್ತ್ರ ಒತ್ತಾಟ ಮತ್ತು ತದನಂತರ ಚೀನೀಯರಿಂದ ಏಕಪಕ್ಷೀಯ ಯುದ್ಧ ವಿರಾಮ ಹಾಗೂ ಹಿಂದಿನ ವಾಸ್ತವ ಹತೋಟಿಯ ರೇಖೆಯ ಹಿಂದೆ ವಾಪಸಾತಿ-ಇವೆಲ್ಲಾ ಆಗಿದ್ದ "ಹಿಂದೀ-ಚೀನೀ ಭಾಯೀ ಭಾಯೀ" ಭಾವನೆಯನ್ನು, ಟಿಬೇಟ್ ಒಪ್ಪಂದದ ಹಾಗೂ ಪಂಚಶೀಲದ ಭಾವನೆಯನ್ನು, ಅವೆಲ್ಲಕ್ಕಿಂತ ಹೆಚ್ಚಾಗಿ ಶಾಂತಿಗಾಗಿ, ಸ್ವಾತಂತ್ರ್ಯಕ್ಕಾಗಿ ಹಾಗೂ ಪೂರ್ವದಲ್ಲಿ ದೀರ್ಘಕಾಲ ದಬ್ಬಾಳಿಕೆಗೊಳಗಾಗಿದ್ದ ದೇಶಗಳ ವಿಮೋಚನೆಗಾಗಿ ನಡೆಸುವ ಹೋರಾಟದಲ್ಲಿ ಸಾಮ್ರಾಜ್ಯಶಾಹೀ ಪಶ್ಚಿಮದ ವಿರುದ್ಧ ಹೋರಾಟದಲ್ಲಿ ಹೊಸ ಯುಗದ ನಾಂದಿ ಹಾಡಿದ ಬಾಂಡುಂಗ್‌ನ ಭಾವನೆಯನ್ನು ಘಾಸಿಗೊಳಿಸಿತು.

ಕರಾಳ ಅಧ್ಯಾಯ

ಕಳೆದೆರಡು ದಶಕಗಳಲ್ಲಿ ಭಾರತ ಮತ್ತು ಚೀನಾ ನಡುವಿನ ಪರಸ್ಪರ ವೈರತ್ವದ ಸಂಬಂಧಗಳು ಒಂದು ರೀತಿಯಲ್ಲಿ ಭಯಂಕರ ಸ್ವಪ್ನ. ಭಾರತ-ಚೀನಾ ಕಲಹ ಎರಡರಲ್ಲಿ ಯಾವ ದೇಶಕ್ಕೂ ಒಳ್ಳೆಯದು ಮಾಡಲಿಲ್ಲ; ತಮ್ಮ ಸಂಕುಚಿತ ಉದ್ದೇಶಗಳಿಗಾಗಿ ಪರಿಸ್ಥಿತಿಯ ದುರ್ಲಾಭ ಪಡೆಯಲು ಕಾದುಕೊಂಡಿದ್ದವರಿಗೆ ಮಾತ್ರ ಒಳ್ಳೆ ಸಂಧಿ ದೊರಕಿದಂತಾಯಿತು. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಗಡಿ ವಿವಾದ ಹಾಗೂ ಗಡಿ ಯುದ್ಧವನ್ನು ಭಾರತದ ಹೊಸದಾಗಿ ಸಂಪಾದಿಸಿದ ಸ್ವಾತಂತ್ರ್ಯವನ್ನು ದೇಶವನ್ನು ನುಂಗಿ ಹಾಕುತ್ತೇನೆಂದು ಬೆದರಿಕೆ ಹಾಕಿದ ಸಮಾಜವಾದೀ ಚೀನಾದಿಂದ ರಕ್ಷಿಸುತ್ತೇನೆಂದು ಹೇಳಿಕೊಂಡು ಭಾರತದ ರಕ್ಷಕನ ಪಾತ್ರವಹಿಸಲು ದೈವದತ್ತವಾದ ಅವಕಾಶವೆಂದು ಪರಿಗಣಿಸಿದರು.

ಆರ್ಥಿಕ ವ್ಯವಸ್ಥೆಯ ಯೋಜನಾಬದ್ಧ ಅಭಿವೃದ್ಧಿಗೆ ಬೇಕಾಗಿದ್ದ ಅಗಾಧ ಧನರಾಶಿಯನ್ನು ಭಾರತದ ರಕ್ಷಣಾ ವೆಚ್ಚದ ಕಡೆಗೆ ತಿರುಗಿಸಿ ರಕ್ಷಣಾ ವೆಚ್ಚವನ್ನು ತೀವ್ರವಾಗಿ ಹೆಚ್ಚಿಸಬೇಕಾಯಿತು. ಕ್ರಮೇಣ ಹೆಚ್ಚುತ್ತಿದ್ದ ಎರಡು ದೇಶಗಳ ನಡುವಣ ವ್ಯಾಪಾರ ಸಂಪೂರ್ಣವಾಗಿ ನಿಂತೇಹೋಯಿತು. ಕಳೆದ ಎರಡು ಮೂರು ವರ್ಷಗಳಲ್ಲಷ್ಟೇ ವ್ಯಾಪಾರ ಸಂಬಂಧಗಳು ಮತ್ತೆ ಆರಂಭವಾಗಿವೆ, ಅದೂ ಹನಿಯಷ್ಟು ಮಾತ್ರ.

ನಮ್ಮ ದೇಶದ ಪ್ರತಿಯೊಬ್ಬ ಸಾಮ್ರಾಜ್ಯಶಾಹೀ ವಿರೋಧಿ, ದೇಶಪ್ರೇಮಿ ಹಾಗೂ ಶಾಂತಿಪ್ರಿಯ ಗಂಡಸು ಮತ್ತು ಹೆಂಗಸು ಭಾರತ ಮತ್ತು ಚೀನಾ ನಡುವಿನ ಶತ್ರುತ್ವದ ಸಂಬಂಧಗಳ ಈ ಕರಾಳ ಅಧ್ಯಾಯ ಒಂದು ದುಃಖಕರ ಭೂತಕಾಲದ ಅಂಗವಾಗಿಬಿಟ್ಟು, ಮುಂಬರುವ ಚೀನಾದ ವಿದೇಶಾಂಗ ಮಂತ್ರಿಯವರ

ಎಂ. ಬಸವಪುನ್ನಯ್ಯ

ಭೇಟಿ ಹಾಗೂ ಭಾರತ ಸರಕಾರದ ನಾಯಕರೊಂದಿಗೆ ಅವರ ಮಾತುಕತೆಗಳಿಂದಾಗಿ ಸಂಬಂಧಗಳು ಮೊದಲಿನಂತಾಗಿ ಎರಡು ದೇಶಗಳ ನಡುವೆ ಉಳಿದಿರುವ ಎಲ್ಲಾ ಭಿನ್ನಾಭಿಪ್ರಾಯಗಳು ಹಾಗೂ ವಿವಾದಗಳು ಶಾಂತಿಯುತವಾಗಿ ಪರಿಹಾರವಾಗಲಾರಂಭವಾಗುವಂತಾಗಿ ಹೊಸ ಯುಗ ಆರಂಭವಾಗುವಂತಾದರೆ ಆ ಬಗ್ಗೆ ಒಂದು ಸಂತೋಷದ ನಿಟ್ಟುಸಿರುಬಿಡಬಹುದು.

ಭಿನ್ನಾಭಿಪ್ರಾಯಗಳು ಬಹಳ

ಎರಡು ದೇಶಗಳ ನಡುವಿನ ಭಿನ್ನಾಭಿಪ್ರಾಯಗಳು ಹಾಗೂ ವಿವಾದಗಳು ಬಹಳ ಇವೆಯೆಂಬ ಅರಿವು ನಮಗಿದೆ, ಅವೆಲ್ಲಕ್ಕೂ ತಕ್ಷಣದ ಹಾಗೂ ಅಂತಿಮವಾದ ಪರಿಹಾರ ದೊರೆಯಬಹುದೆಂದು ನಿರೀಕ್ಷಿಸುವುದು ಸುಲಭವೂ ಅಲ್ಲ, ವಾಸ್ತವಿಕತೆಯೂ ಅಲ್ಲ. ಆದರೂ ಮೇಜಿನ ಅತ್ತ-ಇತ್ತ ಕೂತು ಸಮಾಧಾನದ ಹಾಗೂ ಶಾಂತಿಯುತ ಮಾತುಕತೆಗಳಿಂದ ಪರಿಹಾರವಾಗಲಾರದ ಯಾವ ಸಮಸ್ಯೆಯೂ ಈ ದೇಶಗಳ ನಡುವೆ ಇಲ್ಲ.

ಚೀನಾ-ಭಾರತ ಸಂಬಂಧಗಳು ಸುಧಾರಿಸಿ ಮೊದಲಿನಂತಾದರೆ ಭಾರತ-ಸೋವಿಯೆತ್ ಸಂಬಂಧಗಳ ಕತೆ ಮುಗಿದಂತೆಯೇ ಎಂದು ಕೆಲವು ಟೀಕಾಕಾರರು ಹಾಗೂ ಸಿನಿಕರು ಭವಿಷ್ಯ ನುಡಿಯುತ್ತಿದ್ದಾರೆ, ಭಾರತ, ಚೀನಾ ಸಂಬಂಧಗಳು ಬಿಗಡಾಯಿಸಿ ಹಾಗೆಯೇ ಇದ್ದರೆ ಅದರಿಂದ ಲಾಭ ಪಡೆಯುವ ಹಿತಾಸಕ್ತಿ ಶಕ್ತಿಗಳು ಇವೆ. ಇನ್ನು ಕೆಲವರು ಭಾರತ ಸರಕಾರ ಎಪ್ಪೊಂದು "ದೃಢ"ವಾಗಿರಬೇಕು, "ಜಗ್ಗದಂತಿರಬೇಕು" ಮತ್ತು "ಬಗ್ಗದಂತಿರಬೇಕು"ಎಂದರೆ ಚೀನಾ ಸರಕಾರ "ಮೊಣಕಾಲೂರಿ" ಹೇಳಿದಲ್ಲಿ ಸಹಿಹಾಕುವಂತಾಗಬೇಕು; ಆ ಮೂಲಕ "1962ರ ನಮ್ಮ ನಿಲುವು" ಅದರ ಕೊನೆಯ ಅಕ್ಷರದ ವರೆಗೂ ಸರಿಯೆಂದು ಸಾಧಿಸಲ್ಪಡಬೇಕು ಎಂದು ಹೇಳುವವರೂ ಇದ್ದಾರೆ.

ಇನ್ನೂ ಕೆಲವರಿದ್ದಾರೆ-ಸವಾಲು ಹಾಕಿ ಕೇಳಿದಾಗ, ಚೀನಾ ಇನ್ನೂ ಸಮಾಜವಾದಿ ದೇಶ ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಚೀನಾದೊಂದಿಗೆ ಸಂಬಂಧ ಸುಧಾರಿಸಿಕೊಳ್ಳುವುದರಲ್ಲಿ ಇರುವ ಅಪಾಯದ ಬಗ್ಗೆ ಭಾರತದ ಆಳುವವರ್ಗಗಳನ್ನು ಎಚ್ಚರಿಸುವುದರಲ್ಲಿ ಅವರು ಮಗ್ನರಾಗಿದ್ದಾರೆ. ಅವರು, ಸಮಾಜವಾದೀ ಚೀನಾ ಅಮೇರಿಕನ್ ಸಾಮ್ರಾಜ್ಯಶಾಹಿಯ ಮಿತ್ರನಾಗಿದೆ, ಮೊದಲ ಶತ್ರುವಾಗೇ ಉಳಿದಿದೆ, ಜಾಗತಿಕ ಶಾಂತಿಯನ್ನು ವಿರೋಧಿಸಿ ಸೋವಿಯೆತ್ ಒಕ್ಕೂಟ ಜಾಗತಿಕ ಶಾಂತಿಯ ಪ್ರಮುಖ ಶತ್ರು ಎಂದು ಹಣೆಪಟ್ಟಿ ಹಚ್ಚುತ್ತದೆ ಎಂದು ಪ್ರಸಾರ ನಡೆಸುತ್ತಿದ್ದಾರೆ. ಅದರು ಸೋವಿಯೆತ್ ಸಾಮಾಜಿಕ-ಸಾಮ್ರಾಜ್ಯಶಾಹಿ ಜಾಗತಿಕ ಶಾಂತಿ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯದ ಮುಖ್ಯ ಶತ್ರುವೆಂದು ಹೇಳುವ ಚೀನಾದ ಮಾತನ್ನೇ ಆ ಮೂಲಕ ತಿರುಗುಬಾಣ ಮಾಡಿದ್ದಾರೆ.

ಎಲ್ಲಾ ವಿವಾದವನ್ನು "ಸೇರಿಗೆ ಸವ್ವಾಸೇರು" ಎಂಬ ರೀತಿಯ ರಾಜಕೀಯಕ್ಕಿಳಿಸಿ ತನ್ನ ನೂರು ಕೋಟಿ ಜನಸಂಖ್ಯೆಯೊಡನೆ ಅತ್ಯಂತ ದೊಡ್ಡ ಸಮಾಜವಾದೀ ದೇಶವಾದ ಚೀನಾವನ್ನು ಏಕ್‌ದಂ ಅದು ಅಮೇರಿಕನ್ ಸಾಮ್ರಾಜ್ಯಶಾಹಿಯ ಮಿತ್ರನೆಂಬ ರೀತಿಯಲ್ಲಿ ಖಂಡಿಸದೆ ಅದರ ತಪ್ಪುಗಳನ್ನು ಸಂಪೂರ್ಣವಾಗಿ ಬೇರೆಯೇ ಆದರೀತಿಯಲ್ಲಿ ಟೀಕಿಸಬೇಕು. ಈ ಟೀಕಾಕಾರರ ಉದ್ದೇಶವೇನು, ಅವರು ಸಾಧಿಸಬೇಕೆಂದಿರುವುದೇನು, ಅವರು ತಮ್ಮ ದೃಷ್ಟಿಯಲ್ಲಿ ಚೀನೀ ಜನತೆ, ಚೀನಾದ ಕಮ್ಯುನಿಸ್ಟರು ಮತ್ತು ಚೀನಾದಲ್ಲಿ ಸಮಾಜವಾದವನ್ನು ಗಮನದಲ್ಲಿರಿಸಿಕೊಂಡಿದ್ದಾರೋ ಇಲ್ಲವೋ ಎಂದು ನಮಗೆ ಅರ್ಥವಾಗುವುದಿಲ್ಲ.

ಅತೀ ಪ್ರಮುಖ ವಿವಾದ

ಎರಡೂ ಕಡೆಯ ರಾಜನೀತಿಜ್ಞರು ಹಾಗೂ ರಾಜಕೀಯ ನಾಯಕರು ಏಷ್ಯಾದ ಈ ಎರಡು ದೊಡ್ಡ ದೇಶಗಳ ನಡುವೆ ಕಳೆದೆರಡು ದಶಕಗಳ ಶತ್ರುತ್ವದ ಸಂಬಂಧಗಳ ದುರದೃಷ್ಟಕರ ಅನುಭವದಿಂದ ತಮ್ಮದೇ ಆದ ಸರಿಯಾದ ಹಾಗೂ ರಚನಾತ್ಮಕವಾದ ಪಾಠ ಕಲಿತಿದ್ದಾರೆ ಮತ್ತು ಚೀನೀ ವಿದೇಶಾಂಗ ಮಂತ್ರಿಯವರ ಭೇಟಿ ಮತ್ತು ದ್ವಿಪಕ್ಷೀಯ ಮಾತುಕತೆಗಳು ಉಳಿದಿರುವ ಎಲ್ಲಾ ಭಿನಾಭಿಪ್ರಾಯಗಳು ಹಾಗೂ ತಕರಾರುಗಳಿಗೆ ತಕ್ಷಣದ ಪರಿಹಾರ ಕೊಡದಿದ್ದರೂ ಫಲದಾಯಕ ಫಲಿತಾಂಶ ಕೊಡುವಂತೆ ಸಾಧ್ಯವಾದ ಎಲ್ಲಾ ಪ್ರಯತ್ನ ನಡೆಸುತ್ತಾರೆಂದು ಆಶಿಸಬೇಕಾಗಿದೆ.

ಚೀನಾ ವಿದೇಶಾಂಗ ಮಂತ್ರಿಯ ಮುಂಬರುವ ಭೇಟಿ ಬಗ್ಗೆ ಬಹಳ ಹಿಂದೇನೇ ಯೋಚಿಸಲಾಗಿತ್ತು ಎಂಬುದು ನಿಜ. ಜನತಾ ಚೀನಾದ ಆಂತರಿಕ ಹಾಗೂ ಬಾಹ್ಯ ಧೋರಣೆಗಳಿಗೆ ಸಂಬಂಧಿಸಿದಂತೆ ನಡೆದ ಕೆಲವು ಬೆಳವಣಿಗೆಗಳಿಂದಾಗಿ ವಾಸ್ತವ ರೂಪ ಪಡೆಯಲಿಲ್ಲ. ಈಗ ತಡವಾಗಿಯಾದರೂ ಈ ಭೇಟಿ ನಡೆಯಲಿದೆ ಎಂಬುದು ಚೀನಾದ ವಿದೇಶಾಂಗ ಮಂತ್ರಿಯ ಭೇಟಿಯ ಸಂದರ್ಭವನ್ನು ಉಪಯೋಗಿಸಿಕೊಂಡು ಫಲದಾಯಕ ಮಾತುಕತೆ ಹಾಗೂ ರಚನಾತ್ಮಕ ನಿರ್ಧಾರಗಳಿಗೆ ಬರಲು ಅನುಕೂಲವಾಗುವಂತೆ ಎರಡೂ ಕಡೆ ಸಾಕಷ್ಟು ತಯಾರಿ ನಡೆದಿದೆ ಎಂಬುದನ್ನು ತೋರಿಸುತ್ತದೆ.

ಭಾರತ ಮತ್ತು ಚೀನಾ ಪರಸ್ಪರ ಭಿನ್ನಾಭಿಪ್ರಾಯ ಹೊಂದಿರುವ ವಿಷಯಗಳು ಹಲವಿದ್ದರೂ ಅವು ಸದಾ ಕಾಲ ಇರುವಂತೆ ಮಾಡಿರುವ ಅತೀ ಪ್ರಮುಖ ವಿವಾದವೆಂದರೆ ಗಡಿ ವಿವಾದ ಎಂಬುದು ನಿಸ್ಸಂಶಯ. ಭಾರತ, ಚೀನಾ ನಡುವಿನ ಗಡಿತಕರಾರು ಬಗ್ಗೆ ತಿಳಿದವರೆಲ್ಲರಿಗೂ 1960–62ರಲ್ಲಿ ಎರಡು ಮೂರು ಕಠಿಣ ಅಂಶಗಳಲ್ಲಿ ಮಾತುಕತೆ ಮುರಿದುಬೀಳುವ ಮೊದಲು ಇಬ್ಬರಿಗೂ ಸ್ವೀಕಾರಾರ್ಹವಾಗುವ ಪ್ರಸ್ತಾಪಗಳು ಹಾಗೂ ಪ್ರತಿಪ್ರಸ್ತಾಪಗಳು ಬಂದಿದ್ದವೆಂದು ಗೊತ್ತಿದೆ. ಗಡಿಯ ಈ ಕಠಿಣ ಹಾಗೂ ಅತಿ ಸೂಕ್ಷ್ಮ ಸ್ಥಾನಗಳನ್ನು ಮತ್ತೊಮ್ಮೆ ಚರ್ಚಿಸಿ ಇಬ್ಬರಿಗೂ ತೃಪ್ತಿಕರವಾದ, ಇಬ್ಬರ ನೈತಿಕ ಹಾಗೂ ರಾಜಕೀಯ ಗೌರವಕ್ಕೆ ಧಕ್ಕೆ ತರದಂತೆ, ಯಾರದೇ ಭೌತಿಕ ಹಿತಾಸಕ್ತಿಗಳಿಗೆ ತೊಂದರೆಯಾಗದಂತೆ ಒಂದು ಇತ್ಯರ್ಥಕ್ಕೆ ಬರುವುದು ಅಸಾಧ್ಯವೇನಲ್ಲ.

[ಮುಂದುವರೆಯುವುದು]

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಐರ್ಲೆಂಡ್ – ಹೋರಾಟದ ಸದ್ಯದ ಹಂತ

(4ನೇ ಪುಟದಿಂದ)

ಪರಿಹಾರ ಐರಿಷ್ ಜನತೆಯು ಸ್ವಯಂ ನಿರ್ಧಾರದ ಹಕ್ಕನ್ನು ಪ್ರತಿಪಾದಿಸುವಂತಹದಾಗಿದ್ದು ಜನತೆಯುರಾಷ್ಟ್ರೀಯ ಸ್ವಾತಂತ್ರ್ಯದ ಏಕಮಾತ್ರ ಗ್ಯಾರಂಟಿಯಾದ ಸಮಾಜವಾದಿ ದಾರಿಯನ್ನು ಅಭಿವೃದ್ಧಿಗೊಳಿಸುವಂತದ್ದಾಗಿರಬೇಕೆಂದು ಇತರ ಸಾಮ್ರಾಜ್ಯಶಾಹಿ ವಿರೋಧೀ ಶಕ್ತಿಗಳೊಡಗೂಡಿ ನಾವು ಕಮ್ಯುನಿಸ್ಟರು ಇಟ್ಟುಕೊಂಡಿರುವ ಗುರಿ.

ಉ. ಐರ್ಲೆಂಡಿನಲ್ಲಿ ಕಾರ್ಮಿಕವರ್ಗವನ್ನು ಹಾಗೂ ಅದರ ಗೆಳೆಯರನ್ನು ಒಗ್ಗೂಡಿಸಿ, ಅಖಿಲ ಐರ್ಲೆಂಡಿನಲ್ಲಿ ಅದನ್ನು ಸಾಧಿಸಿ ಈ ಹೋರಾಟದಲ್ಲಿ ಬ್ರಿಟಿಷ್ ಕಾರ್ಮಿಕ ಹಾಗೂ ಪ್ರಜಾಪ್ರಭುತ್ವ ಚಳುವಳಿಗಳು ಸಕ್ರಿಯವಾಗಿ ಪಾಲುಗೊಳ್ಳುವಂತೆಮಾಡುವ ಹೋರಾಟಕ್ಕಾಗಿ ಐರ್ಲೆಂಡ್ ಕಮ್ಯುನಿಸ್ಟ್ ಪಕ್ಷ ಈ ಕೆಳಗಿನ ಪ್ರಜಾಸತ್ತಾತ್ಮಕ ಕೇಳಿಕೆಗಳ ಕಾರ್ಯಕ್ರಮವನ್ನು ಮುಂದಿಡುತ್ತದೆ.

1. ಎಲ್ಲಾ ದಮನಕಾರೀ ಶಾಸನಗಳು ತಕ್ಷಣ ಕೊನೆಗೊಳ್ಳಬೇಕು.

2. ವಿಶೇಷ ಜ್ಯೂರಿಯಿಲ್ಲದ ನ್ಯಾಯಾಲಯಗಳು ಕೊನೆಗೊಳ್ಳಬೇಕು.

3. Emergency Provisions and Prevention of Terrorism ಕಾಯ್ದೆಗಳ ಪ್ರಕಾರ ಶಿಕ್ಷೆಗೆ ಗುರಿಯಾದ ಎಲ್ಲಾ ಬಂದಿಗಳಿಗೂ ರಾಜಕೀಯ ಸ್ಥಾನಮಾನ ಕೊಡಬೇಕು.

4. ಚಿತ್ರಹಿಂಸೆ ಕೊನೆಗೊಳ್ಳಬೇಕು ಹಾಗೂ ಚಿತ್ರಹಿಂಸೆಯ ಸಾಕ್ಷಿಗಳನ್ನು ತೋರಿಸಿಕೊಟ್ಟಿರುವ ಕೇಸುಗಳಲ್ಲಿ ಪೋಲೀಸರಿಂದ ಚಿತ್ರಹಿಂಸೆಯ ಆಪಾದನೆಗಳ ಹಾಗೂ ಅಂತಹ ವಿಚಾರಣೆಗಳ ಸಾರ್ವಜನಿಕ ತನಿಖೆ ನಡೆಯಬೇಕು.

5. ಈಗಿನ ಪೋಲೀಸ್ ಪಡೆ (ಆರ್.ಯು.ಸಿ.)ಯನ್ನು ವಿಸರ್ಜಿಸಿ ಅದರ ಜಾಗದಲ್ಲಿ ಒಂದು ನಾಗರಿಕ ಪಡೆಯನ್ನು ಬೆಳೆಸಬೇಕು ಮತ್ತು ಅಲ್ಸ್ಟರ್ ರಕ್ಷಣಾ ರೆಜಿಮೆಂಟನ್ನೂ ರದ್ದುಗೊಳಿಸಬೇಕು.

6. ಸದ್ಯ ಬ್ರಿಟಿಷ್ ತುಕಡಿಗಳನ್ನು ಬ್ಯಾರಾಕುಗಳಿಗೆ ವಾಪಾಸು ಕರೆಸಬೇಕು. ಅಂತಿಮವಾಗಿ ಅವನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕು.

7. ಉತ್ತರ ಐರ್ಲೆಂಡಿನ ಜನತೆಗೆ ಒಂದು ಹಕ್ಕುಪತ್ರ (Bill of Rights) ಕೊಡಬೇಕು.

8. ನೇರ ಆಡಳಿತವನ್ನು ಕೊನೆಗೊಳಿಸಿ ಅದರ ಸ್ಥಾನದಲ್ಲಿ ಉತ್ತರ ಐರ್ಲೆಂಡಿಗೆ ಒಂದು ಅನ್ವಯಕ್ರಮವಾಗಿ ಪ್ರಾಪ್ತವಾಗುವ ಪಾರ್ಲಿಮೆಂಟ್ ಬೇಕು. ಇದು ಹಕ್ಕುಪತ್ರದ ಕಟ್ಟುಪಾಡುಗಳಿಗನುಗುಣವಾಗಿರಬೇಕು ಮತ್ತು ಆರ್ಥಿಕ ಅಧಿಕಾರಗಳ ಮೇಲೆ ಹತೋಟಿಯಿಂದ ಸಜ್ಜಿತವಾಗಿರಬೇಕು.

9. ಬ್ರಿಟಿಷ್ ಸರಕಾರ ರಾಜಕೀಯ, ಸೈನಿಕ ಹಾಗೂ ಆರ್ಥಿಕವಾಗಿ ಐರ್ಲೆಂಡಿನ ಎಲ್ಲಾ ವ್ಯವಹಾರಗಳಿಂದ ಹಿಂತೆಗೆದುಕೊಳ್ಳುವ, ತನ್ನದೆಂದು ಹೇಳಿಕೊಂಡಿರುವ ಐರ್ಲೆಂಡಿನ ಭೂಭಾಗದ ಮೇಲಿನ ಎಲ್ಲಾ ಹೇಳಿಕೆಯನ್ನು ನಿವಾರಿಸುವ, ಐರಿಷ್ ಜನತೆ–ಉತ್ತರ ಹಾಗೂ ದಕ್ಷಿಣ–ತಮ್ಮ ಹಿತಾಸಕ್ತಿಗಳಿಗೆ ಅತ್ಯುತ್ತಮವಾದ ಭವಿಷ್ಯದ ವ್ಯವಸ್ಥೆಯನ್ನು ನಿರ್ಧರಿಸಲು ಅವಕಾಶಕೊಡುವ ಇಚ್ಛೆಯನ್ನು ತಿಳಿಯಪಡಿಸುವ ಘೋಷಣೆ ಹೊರಡಿಸಬೇಕು.

ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ನಡೆಸುವ ಹೋರಾಟದೊಂದಿಗೆ ದುಡಿಯುವ ಜನರ ಜೀವನಮಟ್ಟವನ್ನು ಕಾದುಕೊಂಡು ಅದನ್ನು ಉತ್ಕೃಷ್ಟಗೊಳಿಸುವ ಆರ್ಥಿಕ ಹೋರಾಟವನ್ನು ಸೇರಿಸಿಕೊಳ್ಳಬೇಕು. ಇದನ್ನು ಗುತ್ತೇದಾರಿ ವಿರೋಧೀ ಮಿತ್ರಕೂಟ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಮಾತ್ರವಲ್ಲ 'ಯೂರೋಪಿಯನ್ ಆರ್ಥಿಕ ಸಮುದಾಯ' (ಇ.ಇ.ಸಿ.) ಐರ್ಲೆಂಡಿನ ಯಾವುದೇ ಭಾಗದ ಸದಸ್ಯತ್ವದ ವಿರುದ್ಧವೂ ನಡೆಸಬೇಕು.

ಇದರೊಂದಿಗೇ ನಮ್ಮ ಪಕ್ಷ ನಮ್ಮ ಜನರ ನಡುವೆ ಲ್ಯಾಟಿನ್ ಅಮೇರಿಕಾ, ಆಫ್ರಿಕಾ ಹಾಗೂ ಏಷ್ಯಾದ ರಾಷ್ಟ್ರೀಯ ವಿಮೋಚನಾ ಶಕ್ತಿಗಳಿಗೆ ಬೆಂಬಲವಾಗಿ, ಸಾಮ್ರಾಜ್ಯಶಾಹಿ ಯುದ್ಧಕೂಟವಾದ ನಾಟೋ (NATO)ದಲ್ಲಿ ಸೆಳೆದುಕೊಂಡು ಐರ್ಲೆಂಡ್ ಗಣರಾಜ್ಯದ ತಟಸ್ಥ ನಿಲುವನ್ನು ಭಗ್ನಗೊಳಿಸುವ ಪ್ರಯತ್ನಗಳಿಗೆ ವಿರುದ್ಧವಾಗಿ, ಯೂರೋಪಿನಲ್ಲಿ ಅಮೇರಿಕಾದ ಅಣುಕ್ಷಿಪಣಿಗಳ ಹೆಚ್ಚಳದ ವಿರುದ್ಧ ಹೋರಾಡುವ ಬಗ್ಗೆ ಹಾಗೂ ಸೋವಿಯೆತ್ ವಿರೋಧೀ ಮತ್ತು ಸಮಾಜವಾದಿ ದೇಶಗಳ ವಿರುದ್ಧ ಇತರ ರೀತಿಯ ಅಪಪ್ರಚಾರಗಳ ಮೂಲಕ ಶೀತಲಯುದ್ಧ ಮತ್ತೆ ಪ್ರಜ್ವಲಿಸುವಂತೆ ನಡೆಸುವ ಪ್ರಯತ್ನಗಳಿಗೆ ವಿರೋಧದ ಕುರಿತು ನಿರಂತರವಾಗಿ ಸೈದ್ಧಾಂತಿಕ ಹೋರಾಟ ನಡೆಸುತ್ತಿದೆ.

ಶಾಂತಿ ಹಾಗೂ ಒಡಂಬಡಿಕೆಯ ಹೋರಾಟ ರಾಷ್ಟ್ರೀಯ ವಿಮೋಚನೆ ಹಾಗೂ ಕಾರ್ಮಿಕವರ್ಗದ ಉದ್ಧಾರದ ಹೋರಾಟದ ಅಭಿನ್ನ ಅಂಗ.

ಈ ಹೋರಾಟ ಸಾಮ್ರಾಜ್ಯಶಾಹಿಗಳ ಬೆದರಿಕೆಯೆಂದರು ಸೋವಿಯೆತ್ ಒಕ್ಕೂಟ ಹಾಗೂ ಇತರ ಸಮಾಜವಾದೀ ದೇಶಗಳ ಶಾಂತಿ ಧೋರಣೆಗಳಿಂದಾಗಿ ಗುಣಾತ್ಮಕವಾಗಿ ಮುಂದುವರಿಯುತ್ತಿದೆ. ○

ಪ. ಬಂಗಾಲ ಮುನಿಸಿಪಲ್ ಚುನಾವಣಾ ಫಲಿತಾಂಶ

ಒಟ್ಟು ಸ್ಥಳಗಳು	1490
ಫಲಿತಾಂಶ ಘೋಷಿಸಿದ್ದು	1489
ಸಿ. ಪಿ. ಐ. (ಎಂ)	696
ಸಿ. ಪಿ. ಐ. (ಎಂ) ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು	8
ಸಿ. ಪಿ. ಐ.	109
ಆರ್. ಎಸ್. ಪಿ.	54
ಫಾರ್ವರ್ಡ್ ಬ್ಲಾಕ್	54
" " (ಮಾರ್ಕ್ಸಿಸ್ಟ್)	9
ಎಸ್. ಪಿ.	1
ಎಡರಂಗದಿಂದ ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು	36
	967
ಕಾಂಗ್ರೆಸ್ (ಯು)	32
ಜನತಾ	19
ಬಿ. ಜೆ. ಪಿ.	13
ಲೋಕದಳ	4
ಎಸ್. ಯು. ಸಿ. ಐ.	4
ಎ. ಐ. ಸಿ. ಪಿ.	5
	77
ಸ್ವತಂತ್ರ ಅಭ್ಯರ್ಥಿಗಳು	445

ಒಟ್ಟು 1489 ಸ್ಥಳಗಳಿಗೆ ಫಲಿತಾಂಶ ಘೋಷಿಸಲಾಗಿದ್ದು ಒಂದು ಸ್ಥಳ (ಕಾಟ್ವಾ)ದ ಫಲಿತಾಂಶ ಬರಬೇಕಾಗಿದೆ.

ಮತದಾನ ಸರಾಸರಿ ಶೇಕಡಾ 62ರಷ್ಟಾಗಿದೆ. ಪ. ಬಂಗಾಳದ ಜನತೆ ಮತ್ತೊಮ್ಮೆ ಎಡರಂಗ ಸರಕಾರಕ್ಕೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿದ್ದು ಮುನಿಸಿಪಲ್ ಚುನಾವಣಾ ಫಲಿತಾಂಶದಿಂದ ಸ್ಪಷ್ಟವಾಗುತ್ತದೆ. ಚುನಾವಣೆಗಳನ್ನು ಬಹಿಷ್ಕರಿಸುವ ಕಾಂಗ್ರೆಸ್ ಬೆದರಿಕೆಯನ್ನು ರಾಜ್ಯದ ಜನತೆ ಮಣ್ಣುಗೂಡಿಸಿದ್ದಾರೆ. ಮತದಾನದ ಪ್ರಮಾಣ (ಶೇ. 62)ದಿಂದ ಇದು ಸ್ಪಷ್ಟ.

ಪ. ಬಂಗಾಲದ ಜನತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಹಾರ್ದಿಕವಾಗಿ ಅಭಿನಂದಿಸಿದೆ.

ಸಿಖ್ ರಾಷ್ಟ್ರೀಯತ್ವ ಮತ್ತು ಖಲೀಸ್ಥಾನ ವಿಚ್ಛಿದ್ರಕಾರಿ ಘೋಷಣೆಗಳು

(5ನೇ ಪುಟದಿಂದ)

ಇದೇ ರೀತಿ ಭೂಮಾಲೀಕರ ಮತ್ತು ಕೃಷಿಕಾರ್ಮಿಕ, ಸಣ್ಣಹಿಡುವಳಿಗಾರರ ಆಸಕ್ತಿಗಳ ನಡುವೆ ಘರ್ಷಣೆ ಇದೆ. ಸಿಖ್ ರಾಷ್ಟ್ರೀಯತೆಯನ್ನು ಹೇಳುವ ಅಕಾಲಿ ಪಕ್ಷ ಇವರ ನಡುವೆ ಯಾರೊಡನೆ ನಿಲ್ಲಬಯಸುತ್ತದೆ? ಪ್ರತಿಯೊಂದು ಧರ್ಮದಲ್ಲೂ ಶೋಷಕ-ಶೋಷಿತರಿರುವುದನ್ನು ಮರೆಯುವಂತಿಲ್ಲ.

ದೇಶದ ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿದೆ. ಬಂಡವಾಳಗಾರ-ಭೂಮಾಲೀಕರನ್ನು ಪ್ರತಿನಿಧಿಸುತ್ತಿರುವ ಕಾಂಗ್ರೆಸ್ ವಿರುದ್ಧ ಎಲ್ಲ ಧರ್ಮಗಳ ಎಲ್ಲ ದುಡಿಯುವವರ್ಗ ಒಂದಾಗಬೇಕಾಗಿದೆ. ಹಿಂದೂ ರಾಷ್ಟ್ರ, ಹಿಂದೂ ದೇಶ ಮತ್ತು ಸಿಖ್ ರಾಷ್ಟ್ರ, ಖಲೀಸ್ಥಾನ ಘೋಷಣೆಗಳ ಉದ್ದೇಶ ಈ ಐಕ್ಯಹೋರಾಟವನ್ನು ಮುರಿಯುವುದೇ ಆಗಿದೆ.

ಸಿಖ್‌ರಿಗೆ ಅಪಾಯಕಾರಿ

ಮತೀಯ ಅಲ್ಪಸಂಖ್ಯಾತರಾಗಿರುವ ಸಿಖ್‌ರಿಗೆ ಈ ಘೋಷಣೆಗಳು ಅಪಾಯಕಾರಿಯಾಗಿವೆ. ರಾಷ್ಟ್ರೀಯ ಮುಖ್ಯ ಪ್ರವಾಹದಿಂದ ಸಿಖ್‌ರನ್ನು ಪ್ರತ್ಯೇಕಿಸುವುದಲ್ಲದೆ ಹಿಂದೂ ಜಾತೀಯ ಶಕ್ತಿಗಳು ಇದರಿಂದ ತಲೆ ಎತ್ತುತ್ತವೆ. ಇಂತಹ ಎಲ್ಲ ಪ್ರವೃತ್ತಿಗಳೂ ಕೇಂದ್ರ ಸರ್ಕಾರದ ಅಧಿಕಾರಶಾಹಿ ಶಕ್ತಿಗಳ ಕೈಬಲಪಡಿಸುತ್ತವೆ.

ಅಕಾಲಿ ನಾಯಕತ್ವ ಚರಿತ್ರೆಯಿಂದ ಪಾಠ ಕಲಿಯಬೇಕು. ಈ ಪಕ್ಷವು ಪ್ರತಿಗಾಮಿ ಶಕ್ತಿಗಳೊಡನೆ ಹೊಂದಾಣಿಕೆ ಮಾಡಿಕೊಂಡಾಗಲೆಲ್ಲ ತೀವ್ರ ಸೋಲನ್ನು ಅನುಭವಿಸಿದೆ. ಮತ್ತು ಪ್ರಗತಿಪಕ್ಷದೊಂದಿಗೆ ಐಕ್ಯ ಹೋರಾಟ ಮಾಡಿದಾಗಲೆಲ್ಲ ತೀವ್ರ ಮುನ್ನಡೆಯನ್ನು ಪಡೆದಿದೆ. ಪಂಜಾಬಿನ ಪ್ರಗತಿಪರ ಚಳುವಳಿಯ ಭವಿಷ್ಯವು ಪಂಜಾಬಿನ ಎಲ್ಲ ಧರ್ಮದ ಎಲ್ಲ ದುಡಿಯುವ ಜನಗಳ ಐಕ್ಯತೆಯನ್ನು ಅವಲಂಭಿಸಿದೆ.

●

ತಾಲೂಕು ಸಮಿತಿ ಸಭೆ

ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಪಾರ್ಟಿಯ ಶಿಡ್ಲಘಟ್ಟ ತಾಲ್ಲೂಕು ಸಮಿತಿಯು 26–5–1981ರಂದು ಮುಳ್ಳೂರಿನಲ್ಲಿ ಸಭೆ ಸೇರಿ ಕಾಂ.ಕೆ.ಎಂ. ವೆಂಕಟೇಶ್‌ರವರನ್ನು ತಾಲ್ಲೂಕು ಸಮಿತಿಯ ಕಾರ್ಯದರ್ಶಿಗಳಾಗಿ ಆಯ್ಕೆ ಮಾಡಿತು.

●

ವಿದಾಯ ಕೋರುವ ಸಮಾರಂಭ

ಉಳ್ಳಾಲ ಹೊೖಗೆಯ ಟ್ರಾಲೆಂಡ್ಸ್ ಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಶ್ರೀಮತಿ ಲೀನಾ ಮೊಂತೆರೊರವರು ವೃತ್ತಿಯಿಂದ ನಿವೃತ್ತಿಹೊಂದಲಿರುವ ಸಂಬಂಧವಾಗಿ, ಅವರಿಗೆ ವಿದಾಯಕೋರುವ ಸಭೆಯೊಂದು 30–5–81ರಂದು ಶಾಲೆಯಲ್ಲಿ ಜರುಗಿತು.

ಉಳ್ಳಾಲ್ ಉರ್ದು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಇಸ್ಮಾಯಿಲ್‌ರವರು ಅಧ್ಯಕ್ಷತೆ ವಹಿಸಿದ್ದರು. ಕಾಸ್ಸಿಯಾ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಸ್ಟೀಫನ್ ಡಿಸೋಜರು ಸ್ವಾಗತ ಭಾಷಣ ಮಾಡಿದರು. ನಾಗರಿಕರ ಪರವಾಗಿ ಯು. ಪಿ. ಡಿಸೋಜರು ಅಭಿನಂದನೆಗಳನ್ನು ಸಲ್ಲಿಸಿದರು.

○

ದಾಂಡೇಲಿಯಲ್ಲಿ ಸಭೆ

ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ರಾಜ್ಯದಾದ್ಯಂತ ನಡೆದ ಸಪ್ತಾಹದ ಅಂಗವಾಗಿ ದಾಂಡೇಲಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು.

ಕಾಂ. ಉಮೇಶ್‌ನಾಯ್ಕ, ಜನ್ನು. ಪಾರೀಷವಾಡಿ, ಮುಹಾಲೆ ಮತ್ತು ಆರ್.ಎ. ಟಾನ್‌ರು ಮಾತನಾಡುತ್ತಾ, ಕಾರ್ಮಿಕರ ಹೋರಾಟಗಳಲ್ಲಿ ಪೋಲೀಸರು ಮಧ್ಯಪ್ರವೇಶಿಸುತ್ತಾ, ಗೂಂಡಾಗಳ ರಕ್ಷಣೆ ಮಾಡುತ್ತಿರುವುದನ್ನು ಖಂಡಿಸಲಾಯಿತು. ಸಭೆಗೆ ಮುನ್ನ ದಾಂಡೇಲಿ ನಗರದಲ್ಲಿ ಈ ನಿಮಿತ್ತ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು.

○

ಐಕ್ಯರಂಗಕ್ಕೆ

ಚಂದಾದಾರರಾಗಿ

ಬೀಡಿಕಾರ್ಮಿಕರ ವಿಜಯ

ರಾಜ್ಯದಾದ್ಯಂತ ವಿವಿದೆಡೆ ನಡೆದ ಹೋರಾಟದ ಫಲವಾಗಿ ಪ್ರತಿಸಾವಿರ ಬೀಡಿಗೆ ಕೂಲಿಯಲ್ಲಿ 1 ರೂ. ಹೆಚ್ಚಾಗಿದೆ. ಇದರಿಂದ ರಾಜ್ಯದ ಲಕ್ಷಾಂತರ ಕಾರ್ಮಿಕರಿಗೆ ಪ್ರಯೋಜನವಾಗಿದೆ. ಇಷ್ಟು ದಿನ ಕಡಿಮೆ ಕೂಲಿಯಲ್ಲಿ ದುಡಿಸುತ್ತಿದ್ದ ಮಾಲೀಕರು ಹೋರಾಟಕ್ಕೆ ಮಣಿದಂತಾಗಿದೆ.

ನ್ಯಾಯುವಾದ ಕೂಲಿ ನಿರ್ಧಾರದ ಪ್ರಶ್ನೆ ಇನ್ನೂ ಬಾಕಿಯಿದೆ. ವಿಪರೀತ ಎಲೆ ಎವರೇಜು ನಿರ್ಧರಿಸುತ್ತಿರುವ ಮಾಲೀಕರ ನೀತಿಯನ್ನು ಎದುರಿಸಬೇಕಾಗಿದೆ. ಕಾಂಟ್ರಾಕ್ಟ್ ಪದ್ಧತಿಯಿಂದಾಗುವ ಎಲ್ಲಾ ಅನಾಹುತಗಳನ್ನು ನಿಲ್ಲಿಸಬೇಕಾಗಿದೆ.

ಕನಿಷ್ಟ ಕೂಲಿ ನ್ಯಾಯುವಾಗಿ ಪುನಃ ವಿಮರ್ಶಿಸುವಂತೆಯೂ, ಬೀಡಿಕಾರ್ಮಿಕರ ಇತರ ಬೇಡಿಕೆಗಳನ್ನು ಈಡೇರಿಸುವಂತೆಯೂ ಹೋರಾಟ ನಡೆಸಲು ರಾಜ್ಯದ ಎಲ್ಲ ಬೀಡಿಕಾರ್ಮಿಕರು ಅಣಿನೆರೆಯಬೇಕಾಗಿದೆ.

ಸಂಘಟನೆಯನ್ನು ಬಲಪಡಿಸಿ, ಎಲ್ಲೆಡೆ ಬೀಡಿಕಾರ್ಮಿಕರ ಹಿತ-ರಕ್ಷಣಾ ಸಮಿತಿಗಳನ್ನು ರಚಿಸಿ ಮುಂದಿನ ಹಂತದ ಹೋರಾಟಕ್ಕೆ ಸಿದ್ಧರಾಗಲು, ಮಂಗಳೂರು ಬೀಡಿ ಕೆಲಸಗಾರರ ಸಂಘ (ಸಿ.ಐ.ಟಿ.ಯು.)ದ ಕಾರ್ಯದರ್ಶಿ ಕಾಂ. ಜೆ. ವೀರಪ್ಪ ವಿನಂತಿಸಿಕೊಂಡಿದ್ದಾರೆ. ●

ಶಾಸಕನ ಮೇಲೆ ಹಲ್ಲೆ

ಪಂಜಾಬ್ ಯುವ ಕಾಂಗ್ರೆ ಧುರೀಣನ ನೇತೃತ್ವದಲ್ಲಿ ಪಂಜಾಬ್‌ನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಸಕ ಹಾಗೂ ಪಂಜಾಬಿ ಸಿ.ಐ.ಟಿ.ಯು. ಉಪಾಧ್ಯಕ್ಷ ಕಾಂ. ಬಲವಂತ ಸಿಂಗ್ ಮತ್ತು ಪಂಜಾಬಿನ ನೌಜವಾನ ಭಾರತ ಸಭಾ (ಡಿ.ವೈ.ಎಫ್.ಐ.)ದ ಅಧ್ಯಕ್ಷ ಕಾಂ. ದರ್ಬಾರ ಸಿಂಗ್ ಮತ್ತು ಇತರ ಮೂವರ ಮೇಲೆ ಅಮಾನುಷ ಹಲ್ಲೆ ಮಾಡಲಾಗಿದೆ.

ರಾಜಪುರನಲ್ಲಿ ನಡೆದ ಈ ಹೀನ ಕೃತ್ಯವನ್ನು ಪಂಜಾಬ್ ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದರೂ ಅಪಾದಿತರ ಮೇಲೆ ಇನ್ನೂವರೆಗೆ ಯಾವದೇ ಕ್ರಮಕೈಗೊಂಡಿಲ್ಲ. ●


ಎನ್. ಡಿ. ಶಂಕರ್ ನಿಧನ

ಖ್ಯಾತ ಸ್ವಾತಂತ್ರ್ಯ ಹೋರಾಟಗಾರ, ಕಾರ್ಮಿಕ ಸಂಘಟನೆಯ ಆದ್ಯ ಪ್ರವರ್ತಕ ಎನ್. ಡಿ. ಶಂಕರ್ ಅವರು ಮಂಗಳವಾರ (9-6-81) ನಿಧನರಾದ ದುಃಖಕರ ವಾರ್ತೆ ಬಂದಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಶ್ರೀಯುತರು 1939ರ ಸುಮಾರಿನಲ್ಲಿ ಕಾರ್ಮಿಕ ಸಂಘಟನೆಯ ಮುಂಚೂಣಿಯಲ್ಲಿದ್ದರು.

ಎನ್. ಡಿ. ಶಂಕರ್ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಎನ್. ಎಲ್. ಉಪಾಧ್ಯಾಯರು ತಮ್ಮ ಶೋಕವನ್ನು ವ್ಯಕ್ತಪಡಿಸಿ, ಮೃತರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ. ●

ಕಾಂ. ಶ್ರೀರಾಮರೆಡ್ಡಿ ವಿದೇಶಕ್ಕೆ



ಸೋವಿಯೆತ್ ರಷ್ಯಾದ ವಿದ್ಯಾರ್ಥಿ-ಯುವಜನ ಸಂಘಟನೆಗಳೊಂದಿಗೆ ಸೌಹಾರ್ದ ಮಾತುಕತೆ ನಡೆಸಲು ಜೂನ್ ತಿಂಗಳಲ್ಲಿ ಮಾಸ್ಕೋಗೆ ಭೇಟಿಕೊಡಲು ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಸಂಘಟನೆಗಳನ್ನು ಆಹ್ವಾನಿಸಲಾಗಿದೆ. ರಷ್ಯಾಕ್ಕೆ ತೆರಳಲಿರುವ ಈ ತಂಡದಲ್ಲಿ ಎಸ್. ಎಫ್. ಐ. ಪರವಾಗಿ ಕಾಂ. ಉಮಾಮಹೇಶ್ವರರಾವ್, ಪಿ. ಶಶಿಯವರು ಮತ್ತು ಡಿ. ವೈ. ಎಫ್. ಐ.ನ ಇಬ್ಬರು ಪ್ರತಿನಿಧಿಗಳ ಪೈಕಿ ಕರ್ನಾಟಕದಿಂದ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಸಂಚಾಲಕ ಕಾಂ. ಶ್ರೀರಾಮರೆಡ್ಡಿಯವರು ಒಬ್ಬರಾಗಿರುತ್ತಾರೆ.

ಜೂನ್ 23ರಂದು ಮಾಸ್ಕೋಗೆ ತೆರಳಲಿರುವ ಕಾಂ. ಶ್ರೀರಾಮರೆಡ್ಡಿಯವರಿಗೆ ಐಕ್ಯರಂಗ ಶುಭಕೋರುತ್ತದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154

EDITOR : M. K. BHAT